**ಶ್ರೀ ವೈಕುಂಠ ವಾರ್ತಾ**

**ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ**

ಸಂಪುಟ : 22 | ಸಂಚಿಕೆ : 03
ಮಂಡ್ಯ | ಜನವರಿ 2023
ಪುಟಗಳು : 20

**ಗೌರವ ಸಂಪಾದಕರು :**
**ಕೆ. ಎನ್. ರವಿ**

**ಪ್ರಕಾಶಕರು ಮತ್ತು ಸಂಪಾದಕರು :**
**ಶಿವಮೂರ್ತಿ ಕೀಲಾರ**
**ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**

**ಮುದ್ರಕರು :**
**ಶಿವಪ್ರಕಾಶ್, ಐಡಿಯಲ್ ಆಫ್‌ಸೆಟ್ ಪ್ರಿಂಟರ್ಸ್ ಮಂಡ್ಯ**

**ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು**

**ವಿಳಾಸ**
**ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**
**5ನೇ ಕ್ರಾಸ್, ಶಂಕರನಗರ, ಮಂಡ್ಯ**

## –: ಪ ರಿ ವಿ ಡಿ :–

| ಲೇಖನಗಳು | ಪುಟ ಸಂಖ್ಯೆ |
|---|---|
| 1. ಬ್ರಿಟೀಷರು ನಂಬಿ ಕರೆದರೆ ಓ ಎನ್ನನೇ ಶಿವನು | –ಸಂಗ್ರಹ |
| 2. ಬಾಡಿಗೆ ಮನೆ | – ನೀಲಕಂಠ ದಾತಾರ |
| 3. ಅರಿತು ಬಾಳಿದ ಯೋಗಿ | – ಶೋಭಾ ನಾಗಭೂಷಣ್ |
| 4. ನಮ್ಮ ಭವ್ಯ ಭಾರತ | – ವಿಜಯಲಕ್ಷ್ಮಿ ಕೊಡಿಯಾಲ |
| 5. ಬದುಕು ಮತ್ತು ಭರವಸೆ | – ಸಂಗ್ರಹ |
| 6. ದೇಶದ ಬೆನ್ನೆಲುಬು ಇವನು | – ಉಮಾ ಜೆ, ಎಬಿವಿಕೆ ಹೈಸ್ಕೂಲ್ ಕನ್ನಡ ಮಾಧ್ಯಮ |
| 7. ಎಲ್ಲಾ ಮಿತ್ರರು ಮುಪ್ಪಾಗುತ್ತಿದ್ದಾರೆ | – ಸಂಗ್ರಹ |
| 8. ಗೋವಿಂದ ಸಭಾಂಗಣ ತಿರುಪತಿ | – ಎಂ ಕೆ ಶಂಕರನಾರಾಯಣ ಭಟ್ಟರು |
| 9. ಕಾಲ | – ಸಂಗ್ರಹ |
| 10. ಮಹಿಳೆಯೊಬ್ಬಳು ಸಾಕು | – ಶ್ರೀಮತಿ ಕುಸುಮಾ ಜಿ ಭಟ್ |
| 11. ಮಳೆ ಬಂದಂಗೆ ಛತ್ರಿ ಹಿಡಿ, ಸಮಯಕ್ಕೆ ತಕ್ಕ ದಾರಿ ಹಿಡಿ | – ಸಂಗ್ರಹ |
| 12. ನಮೋ ವೆಂಕಟೇಶ | – ಟಿ ಎನ್ ಶಿವಕುಮಾರ್ |
| 13. ಯುಗಾದಿಯ ಆಶಯ | – ಶ್ರೀಮತಿ ಕಾವ್ಯ, ಎಬಿವಿಕೆ ಪ್ರೈಮರಿ ಸ್ಕೂಲ್, ಮಂಡ್ಯ |
| 14. ಸಂಭ್ರಮದ ಶ್ರಾವಣದಲ್ಲಿ ಸಾಂಸ್ಕೃತಿಕ ಉತ್ಸವ | –ಸಂಗ್ರಹ |

# ಸಂಪಾದಕೀಯ

2022ಕ್ಕೆ ವಿದಾಯ ಹೇಳಿ 2023ರ ಹೊಸ ವರ್ಷವನ್ನು ಸ್ವಾಗತಿಸೋಣ. 2022 ಪ್ರತಿಯೊಬ್ಬರ ಬದುಕಿನ ಕಷ್ಟದ ವರ್ಷ. ವಿಪರೀತ ಮಳೆ, ಅನಿರೀಕ್ಷಿತ ತಿರುವುಗಳು, ಸಾಮಾಜಿಕ ತಲ್ಲಣಗಳು, ರಸ್ತೆ ಅಪಘಾತಗಳು, ಸರಣಿ ಆತ್ಮಹತ್ಯೆಗಳದೇ ಕಾರುಬಾರು. ಹೊಸ ವರ್ಷ 2023 ಇವೆಲ್ಲವನ್ನು ಮೀರಿ ಭರವಸೆ, ಹೊಸ ಆಕಾಂಕ್ಷೆಗಳನ್ನು ನಿರೀಕ್ಷೆಗಳನ್ನು ಇಟ್ಟುಕೊಳ್ಳುವ ವರ್ಷವಾಗಲೀ ಎಂದು ಹಾರೈಸುತ್ತೇವೆ.

2023ರ ಸಂಕ್ರಾಂತಿ ಸಂಭ್ರಮ ತರಲು ಸಂಕ್ರಾಂತಿಯಿಂದ ಆರಂಭವಾಗುವ ಹೊಸ ವರ್ಷ ರೈತರ ಬದುಕಿನಲ್ಲಿ ಹೊಸ ನಿರೀಕ್ಷೆಗಳನ್ನು, ಆಶಯಗಳನ್ನು ತರಲಿ. ಕರೋನಾ ಹೆಮ್ಮಾರಿಯ ಭೀತಿ ಭಾರಿಸುತ್ತಲೇ ಇದೆ. 2020ರ ಮಾರ್ಚ್‌ನಿಂದ ಕಾಡುತ್ತಿರುವ ಕರೋನಾ ಮತ್ತೆ ಇಡೀ ದೇಶಕ್ಕೆ ಸುನಾಮಿ ರೀತಿಯಲ್ಲಿ ಅಪ್ಪಳಿಸುವ ಭಯದ ನಡುವೆ ಬದುಕು ಸಾಗಿಸುವ ಅನಿವಾರ್ಯತೆ ದೇಶದ ಜನರಿಗೆ ಎದುರಾಗಿದೆ.




ಕರೋನಾದಿಂದ ಸಾಕಷ್ಟು ತೊಂದರೆಗಳು, ನೋವು ಸಂಕಟ ಅನುಭವಿಸುತ್ತಿದ್ದನ್ನು ನಾವು ನೋಡಿದ್ದೇವೆ. ಪ್ರಕೃತಿಯ ನಿಯಮಗಳೆಲ್ಲಾ ತಲೆಕೆಳಗಾಗಿವೆ. ಈ ಕಾರಣದಿಂದಲೇ ಕರೋನಾದಂತಹ ವೈಪರೀತ್ಯಗಳು ನಮ್ಮನ್ನು ಬಾಧಿಸುತ್ತವೆ. ಈ ನಡುವೆ ರಾಜಕೀಯ ಅವಾಂತರಗಳು, ಸಾಮಾಜಿಕ ತಲ್ಲಣಗಳು ಪ್ರತೀ ವರ್ಷವು ಇದ್ದದೇ. 2023ರಲ್ಲಿ ಕರ್ನಾಟಕದಲ್ಲಿ ಚುನಾವಣಾ ವರ್ಷ. ಸತತ 6 ತಿಂಗಳುಗಳ ಕಾಲ ಚುನಾವಣಾ ಸಿದ್ಧತೆ. ನಂತರ 6 ತಿಂಗಳ ಕಾಲ ಸಂಭ್ರಮ. ಆದರೆ ಅಭಿವೃದ್ಧಿಯ ಮಾತುಗಳು ಮಾತ್ರ ಸದಾ ಗುನುಗುನುಗಿಸುತ್ತಿದೆ. ಆದರೂ ಸಹ 2023 ಆಶಾದಾಯಕ ವರ್ಷವಾಗಿದೆ.

ಹೊಸ ವರ್ಷದಲ್ಲಿ ನಿರೀಕ್ಷೆಗಳು ಹೆಚ್ಚಾಗಿರುತ್ತದೆ. ನಂತರದ ದಿನಗಳಲ್ಲಿ ನಿರೀಕ್ಷೆಗಳ ಸವಾಲು ಇದ್ದುದ್ದೇ. ಯಾವುದೂ ಕೂಡ ಅಂದು ಕೊಂಡಂತೆ ನಡೆಯುವುದಿಲ್ಲ. ನಡೆದಂತೆ ಅಂದುಕೊಂಡಿರುವುದಿಲ್ಲ. ಇದೇ ಬದುಕಿನ ಮರ್ಮ. ಒಟ್ಟಾರೆ 2023 ಆಶಾದಾಯಕವಾಗಿರಲೀ ಯಾವುದೇ ನಿರೀಕ್ಷೆಗಳು ಹುಸಿಯಾಗದಿರಲಿ.

**ಶ್ರೀ ಶಿವಮೂರ್ತಿ ಕೀಲಾರ**
ಅಧ್ಯಕ್ಷರು, ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್(ರಿ)
ಪ್ರಧಾನ ಕಾರ್ಯದರ್ಶಿ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ (ರಿ). ಮಂಡ್ಯ

# ಬ್ರಿಟೀಷರು ನಂಬಿ ಕರೆದರೆ ಓ ಎನ್ನನೇ ಶಿವನು?

ವಿಸ್ಮಯದ ಶಿವಾಲಯವೊಂದು ಮಧ್ಯ ಪ್ರದೇಶದ ಶಾಜಾಪೂರ್ ಜಿಲ್ಲೆಯ ಅಗರ್ ಎಂಬಲ್ಲಿದೆ. ವಿಸ್ಮಯ ವೇನೆಂದರೆ ಇದನ್ನು ಕಟ್ಟಿಸಿದವರು ಬ್ರಿಟೀಷ್ ಸೈನ್ಯದಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿ ಸೇವೆ ಸಲ್ಲಿಸುತ್ತಿದ್ದ ಮಾರ್ಟಿನ್ ಎಂಬ ಕ್ರಿಶ್ಚಿಯನ್ ಅಧಿಕಾರಿ! ಇದರ ಹಿಂದಿನ ರೋಚಕ ಪ್ರಸಂಗ ಹೀಗಿದೆ. 1879 ರಲ್ಲಿ ಮಾರ್ಟಿನ್ ಅಫ್ಘಾನಿಸ್ಥಾನದ ಯುದ್ಧರಂಗದಲ್ಲಿದ್ದರು. ಅವರ ಪತ್ನಿ ಮಧ್ಯ ಪ್ರದೇಶದಲ್ಲಿದ್ದರು. ಅವರು ತಮ್ಮ ಯೋಗಕ್ಷೇಮವನ್ನು ಪತ್ರ ಮುಖೇನ ಪತ್ನಿಗೆ ತಿಳಿಸುತ್ತಿದ್ದರು. ಇದ್ದಕ್ಕಿದ್ದಂತೆ ಪತ್ರಗಳು ಬರುವುದು ನಿಂತು ಹೋದಾಗ ಲೇಡಿ ಮಾರ್ಟಿನ್ ಚಿಂತಾಕ್ರಾಂತರಾದರು.

ಒಮ್ಮೆ ಆಕೆ ಅಲ್ಲಿದ್ದ ಬೈಜನಾಥ್ ಮಹಾದೇವ ಮಂದಿರದ ಬಳಿ ಹೋಗುತ್ತಿದ್ದಾಗ ದೇವಾಲಯದ ಒಳಗಿನಿಂದ ಕೇಳಿ



ಬರುತ್ತಿದ್ದ ಮಂತ್ರೋಚ್ಛಾರಣೆಯ ಮತ್ತು ಶಂಖ–ಜಾಗಟೆಗಳ ಶಬ್ಧ ಆಕೆಯನ್ನು ಆಕರ್ಷಿಸಿತು. ಆಕೆ ಕುತೂಹಲದಿಂದ ದೇವಾಲಯದೊಳಕ್ಕೆ ಹೋಗಿ ನಿಂತುಕೊಂಡರು. ಅಲ್ಲಿ ಪೂಜೆ ಮಾಡುತ್ತಿದ್ದ ಪುರೋಹಿತರು ಆಕೆ ಚಿಂತಾಕ್ರಾಂತಳಾಗಿರುವ ಕಾರಣವನ್ನು ಕೇಳಿದರು. ಆಕೆ "ನನ್ನ ಪತಿ ಯುದ್ಧರಂಗಕ್ಕೆ ಹೋಗಿದ್ದಾರೆ. ಅವರಿಂದ ಹಲವಾರು ದಿನಗಳಿಂದ ಯಾವ ಸಂದೇಶವೂ ಬಂದಿಲ್ಲ. ಅವರಿಗೆ ಏನಾಗಿದೆಯೋ ಏನೋ?" ಎಂದು ಗೋಳಾಡಿದರು.

ಪುರೋಹಿತರು ಸಂದರ್ಭೋಚಿತವಾಗಿ ಸಾಂತ್ವಾನ ಹೇಳುತ್ತಾ "ನೀವು ಶಿವನನ್ನು ನಂಬಿ ಪ್ರಾರ್ಥಿಸಿ. ಕಷ್ಟಗಳಿಂದ ಪಾರುಗೊಳಿಸುತ್ತಾನೆ" ಎಂದರು. ಆಕೆ ಏನು ಪ್ರಾರ್ಥನೆ ಮಾಡ ಬೇಕೆಂದು ಕೇಳಿದಾಗ ಅವರು ಲಘುರುದ್ರ ಅನುಷ್ಠಾನವನ್ನೂ, ಓಂ ನಮಃ ಶಿವಾಯ ಮಂತ್ರ ಜಪವನ್ನೂ ಹನ್ನೊಂದು ದಿನಗಳ ಕಾಲ ಮಾಡಲು ಸೂಚಿಸಿದರು.

ಆಕೆ ಅದರಂತೆ ಹನ್ನೊಂದು ದಿನ ಶ್ರದ್ಧೆಯಿಂದ ಮಂತ್ರಜಪವನ್ನು ಮಾಡಿದರು. ಹನ್ನೊಂದನೆಯ ದಿನ ಮಾರ್ಟಿನ್ನರಿಂದ ಒಂದು ಪತ್ರ ಬಂದಿತು. ಅದರಲ್ಲಿ "ಇಲ್ಲಿ ಯುದ್ಧರಂಗದಲ್ಲಿ ಇದ್ದಕ್ಕಿದ್ದಂತೆ ಪಠಾಣರು ನಮ್ಮನ್ನು ಎಲ್ಲ ಕಡೆಗಳಿಂದಲೂ ಸುತ್ತುರುವರೆದರು. ತಪ್ಪಿಸಿಕೊಂಡು ಬರುವ ಅವಕಾಶಗಳೇ ಇರಲಿಲ್ಲ. ಸಾವು ಖಚಿತವೆನ್ನುವ ಸನ್ನಿವೇಶ. ಹಾಗಾಗಿ ನಿನಗೆ ಸಂದೇಶಗಳನ್ನು ಕಳುಹಿಸಲಾಗಲಿಲ್ಲ. ಏನೂ ತೋಚದ ಪರಿಸ್ಥಿತಿಯಲ್ಲಿದ್ದಾಗ, ಇದ್ದಕ್ಕಿದ್ದಂತೆ ಒಬ್ಬ ಭಾರತೀಯ ಯೋಗಿ ಅಲ್ಲಿಗೆ ಬಂದರು. ಆತ ಅಜಾನುಬಾಹು, ಉದ್ದ ಜಡೆ, ಕೈಯಲ್ಲಿ ತ್ರಿಶೂಲ, ಚರ್ಮದ ಉಡುಪು, ಬೆರಗುಗೊಳಿಸುವ ವ್ಯಕ್ತಿತ್ವ ಹೊಂದಿದ್ದ. ಆತ ಕೈಯಲ್ಲಿ ತ್ರಿಶೂಲವನ್ನು ಹಿಡಿದು ತಿರುಗಿಸುವ ರೀತಿಯನ್ನು ನೋಡಿ ಪಠಾಣರು ಪ್ರಾಣಭಯದಿಂದ ಓಡಿಹೋದರು. ನಾವು ಯುದ್ಧದಲ್ಲಿ ಗೆದ್ದುಬಿಟ್ಟೆವು. ನಾನು ಯೋಗಿಗೆ ವಂದಿಸಿದಾಗ ಆತ "ನಿಮ್ಮ ಪತ್ನಿಯ ಪ್ರಾರ್ಥನೆಯಿಂದಾಗಿ ನಿಮ್ಮನ್ನು ರಕ್ಷಿಸಲು ನಾನಿಲ್ಲಿ ಬಂದಿದ್ದೇನೆ ಎಂದರು" ಎಂದು ಬರೆದಿತ್ತು. ಕಾಗದವನ್ನು ಓದುತ್ತಿದ್ದಂತೆ ಲೇಡಿ ಮಾರ್ಟಿನರು ಸಂತೋಷದ ಕಣ್ಣೀರು ಸುರಿಸಿದರು. ಅವರ ಹೃದಯ ತುಂಬಿ ಬಂತು. ಅವರು ತಮ್ಮ ಮನೆಯಲ್ಲಿಟ್ಟು ಪೂಜಿಸುತ್ತಿದ್ದ ಶಿವನ ಮೂರ್ತಿಗೆ ಮತ್ತೆ ಮತ್ತೆ ನಮಸ್ಕಾರ ಮಾಡಿದರು. ಇದಾದ ಕೆಲವೇ ವಾರಗಳಲ್ಲಿ ಮಾರ್ಟಿನ್ ಹಿಂದಿರುಗಿ ಬಂದರು. ಲೇಡಿ ಮಾರ್ಟಿನರು ಇಲ್ಲಿ ಲಘುರುದ್ರ ಅನುಷ್ಠಾನ, 'ಓಂ ನಮಃ ಶಿವಾಯ' ಮಂತ್ರ ಜಪಿಸಿದ್ದನ್ನೂ ತಿಳಿಸಿದರು. ಅಂದಿನಿಂದ ದಂಪತಿಗಳಿಬ್ಬರೂ ಶಿವಭಕ್ತರಾದರು. 1883 ರಲ್ಲಿ ಅವರು ಹದಿನೈದು ಸಾವಿರ ರೂಪಾಯಿಗಳನ್ನು ಕೊಟ್ಟು ದೇವಾಲಯ ಪುನರ್ನಿರ್ಮಾಣ ಮಾಡಿಸಿದರು. ದೇವಾಲಯದಲ್ಲಿ ಇರುವ ಒಂದು ಶಿಲಾಶಾಸನದಲ್ಲಿ ಈ ಘಟನೆಯ ವಿವರಗಳು ಕೆತ್ತಲ್ಪಟ್ಟಿದೆ. ಭಾರತವನ್ನು ಆಳಿದ ಬ್ರಿಟೀಷರು ಕೆತ್ತಿಸಿ ಕೊಟ್ಟ ಏಕೈಕ ಹಿಂದೂ ದೇವಾಲಯ ಈಗಲೂ ಅಲ್ಲಿದೆ.


ದೇವರು ಯಾರಾದರೇನು? ಭಕ್ತರು ಯಾರಾದರೇನು? ನಂಬಿ ಕರೆದೊಡೆ ದೇವರು ಓ ಎನ್ನದಿರುತ್ತಾನೆಯೇ?

–ಸಂಗ್ರಹ

# ಬಾಡಿಗೆ ಮನೆ

ತನ್ನ ಮನೆಯಲ್ಲಿ ಬಾಡಿಗೆಗೆ ಇದ್ದ ಓರ್ವ ವೃದ್ಧನು ಬಾಡಿಗೆಯ ಹಣವನ್ನು ಬಾಕಿ ಉಳಿಸಿದ್ದರಿಂದ, ಮನೆಯ ಮಾಲೀಕ ಆತನನ್ನು ತನ್ನ ಮನೆಯಿಂದ ಹೊರಗೆ ಹಾಕಿದ್ದನು. ಆ ಮುದುಕನ ವಯಸ್ಸು 94 ವರ್ಷ. ವೃದ್ಧನ ಹತ್ತಿರ ಒಂದು ಹಳೆಯದಾದ ಕಬ್ಬಿಣದ ಪಲಂಗು, ಒಂದೆರಡು ಅಲ್ಯುಮಿನಿಯಂ ತಟ್ಟೆ, ಪ್ಲಾಸ್ಟಿಕ್‌ನ ಬಕೆಟ್ಟು ಹಾಗೂ ಹರಿದ ಹಾಸಿಗೆ ಹೊದಿಕೆ ಇವು ಅವರ ಹತ್ತಿರ ಇದ್ದುದನ್ನು ಮನೆಯ ಮಾಲೀಕ ರಸ್ತೆಯಲ್ಲಿ ಎಸೆದಿದ್ದ.

ಮುದುಕನು ಮನೆಯ ಮಾಲೀಕನಿಗೆ ಸ್ವಲ್ಪ ಸಮಯ ಕೊಡಿ ಎಂದು ಬೇಡಿಕೊಳ್ಳತೊಡಗಿದನು. ಇನ್ನಿತರ ಜನರಿಗೂ ವೃದ್ಧನ ಬಗ್ಗೆ ಕರುಣೆಯಾಗಿ ಮನೆಯ ಮಾಲೀಕನಿಗೆ ವೃದ್ಧನಿಗೆ ಕೆಲವು ದಿನಗಳವರೆಗೆ ಸಮಯ ಕೊಡಲು ಹೇಳಿದರು.



ಮನೆಯ ಮಾಲೀಕ ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡ. ಅಲ್ಲಿ ಕೂಡಿದ ಜನರಲ್ಲಿ ಕೆಲವರು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ವೃಧ್ಧನ ಸಾಮಾನುಗಳನ್ನು ಮತ್ತೆ ಮನೆಯ ಒಳಗೆ ಒಯ್ದು ಇಟ್ಟರು.

ಅಲ್ಲಿಂದಲೇ ಹೋಗುತ್ತಿದ್ದ ಓರ್ವ ಪತ್ರಕರ್ತನೋರ್ವನು ಈ ಘಟನೆನ್ನು ನೋಡುತ್ತಾನೆ. ಒಬ್ಬ ವೃಧ್ಧನ ಮೇಲೆ ಈ ರೀತಿಯ ದೌರ್ಜನ್ಯ ನಡೆದಿರುವುದನ್ನು ತಾನು ಕೆಲಸ ಮಾಡುತ್ತಿದ್ದ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬ ಯೋಚನೆ ಯಿಂದ ತನ್ನ ಪತ್ರಿಕಾ ಕಾರ್ಯಾಲಯಕ್ಕೆ ಹೋಗುತ್ತಾನೆ. ಜೊತೆಗೆ ಅಲ್ಲಿನ ಘಟನಾವಳಿಗಳ ಕೆಲವು ಫೋಟೋಗಳನ್ನೂ ತೆಗೆದುಕೊಂಡು ಹೋಗಿರುತ್ತಾನೆ.

ಆತ ಅದರ ಬಗ್ಗೆ ಸುದ್ದಿ ಬರೆಯುತ್ತಾನೆ. ಅದಕ್ಕೊಂದು ತಲೆಬರಹ ಹಾಕುತ್ತಾನೆ. "ಕ್ರೂರ ಮನೆಯ ಮಾಲೀಕನಿಂದ ವೃಧ್ಧನ ಮೇಲೆ ಅನ್ಯಾಯ"!

ಇದೆಲ್ಲ ಘಟನಾವಳಿಗಳ ಬಗ್ಗೆ ತಾನು ಬರೆದ ಎಲ್ಲ ಲೇಖನವನ್ನು ತಾನು ಕೆಲಸ ಮಾಡುತ್ತಿದ್ದ ಪತ್ರಿಕೆಯ ಸಂಪಾದಕರಿಗೆ ತೋರಿಸುತ್ತಾನೆ.

ತನ್ನ ವರದಿಗಾರನು ತಂದ ವರದಿ ಓದಿ, ಅಲ್ಲಿನ ಘಟನಾವಳಿಯ ಫೋಟೋ ನೋಡಿ, ಪತ್ರಿಕೆಯ ಸಂಪಾದಕರು ಒಂದು ಕ್ಷಣ ಗರಬಡಿದಂತೆ ದಿಗ್ಮೂಢರಾಗುತ್ತಾರೆ. ಅವರು ತನ್ನ ವರದಿಗಾರನಿಗೆ ಕೇಳುತ್ತಾರೆ.

"ಈ ಫೋಟೋದಲ್ಲಿರುವ ಮುದುಕನ ಪರಿಚಯ ಇದೆಯೇ?"

ವರದಿಗಾರ "ಇಲ್ಲ" ಅಂತ ತಲೆ ಅಲ್ಲಾಡಿಸುತ್ತಾನೆ.

ಮರುದಿನ ಆತನ ದಿನಪತ್ರಿಕೆಯಲ್ಲಿ ಮುಖಪುಟದಲ್ಲಿ ದೊಡ್ಡ ಅಕ್ಷರಗಳಲ್ಲಿ ವರದಿ ಪ್ರಕಟವಾಗಿರುತ್ತದೆ.

"ಗುಲ್ಜಾರಿಲಾಲ್ ನಂದಾ; ಭಾರತದ ಮಾಜಿ ಪ್ರಧಾನಿ, ದಯನೀಯ ಸ್ಥಿತಿಯಲ್ಲಿ!" ಎಂಬ ತಲೆಬರಹದಲ್ಲಿ ಪ್ರಕಟಗೊಂಡಿರುತ್ತದೆ.

ಆ ವರದಿಯಲ್ಲಿ, ಮಾಜಿ ಪ್ರಧಾನಿ ನಂದಾ ಅವರು ಮನೆಯ ಮಾಲೀಕನಿಗೆ ಬಾಡಿಗೆ ಕೊಡಲು ಶಕ್ಯವಿಲ್ಲದ ಪ್ರಸಂಗ, ಅವರ ಹಾಸಿಗೆ ಹೊದಿಕೆಯನ್ನು ಮಾಲಿಕನು ರಸ್ತೆಗೆ ಎಸೆದಿದ್ದರ ಬಗ್ಗೆ ಬರೆಯಲಾಗಿರುತ್ತದೆ.

ಅದರಲ್ಲಿ ಮುಂದುವರೆದು, ಇಂದು ಒಂದೇ ಸಲ ಆರಿಸಿ ಬಂದವರೂ ಕೂಡ ಕೋಟ್ಯಾಧಿಪತಿಗಳಾಗಿರುತ್ತಾರೆ. ಆದರೆ ಎರಡು ಬಾರಿ ಹಂಗಾಮಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಹಾಗೂ ಬಹಳ ದಿನ್‌ಗಳ ಕಾಲ ಕೇಂದ್ರದ ಮಂತ್ರಿಯಾಗಿದ್ದ ವ್ಯಕ್ತಿಯ ಹತ್ತಿರ ವಾಸಿಸಲು ಸ್ವಂತದ್ದು ಅಂತ ಒಂದು ಮನೆಯೂ ಇಲ್ಲ.

ವಾಸ್ತವಿಕವಾಗಿ ಗುಲ್ಜಾರಿಲಾಲ್ ನಂದಾ ಅವರಿಗೆ ಪ್ರತಿ ತಿಂಗಳು ಐದು ನೂರು ರೂಪಾಯಿ ಭತ್ಯೆ ಇತ್ತು. ಆದರೆ ತಾನು ಆ ಭತ್ಯೆಗಾಗಿ ಸ್ವಾತಂತ್ರ್ಯ ಹೋರಾಟಗಾರನಾಗಿರಲಿಲ್ಲ ಎಂದು ಹೇಳಿ ಐದು ನೂರು ರೂಪಾಯಿ ಭತ್ಯೆಯನ್ನು ಪಡೆಯಲು ನಿರಾಕರಿಸಿದ್ದರು. ಆದರೆ ನಂತರ ಅವರ ಕೆಲವು ಗೆಳೆಯರು, ನೀವು ಐದು ನೂರು ರೂಪಾಯಿಯ ಭತ್ಯೆಯನ್ನು ನಿರಾಕರಿಸಿದರೆ ನಿಮ್ಮ ಹೊಟ್ಟೆಗೆ ಏನು ಮಾಡುವಿರಿ ಎಂದೆಲ್ಲಾ ಅವರಿಗೆ ತಿಳಿಹೇಳಿ, ಆ ಭತ್ಯೆಯನ್ನು ಅವರು ತೆಗೆದುಕೊಳ್ಳುವ ಹಾಗೆ ನೋಡಿಕೊಂಡಿದ್ದರು.

ಆ ವರದಿ ಪ್ರಕಟವಾದ ಮರುದಿನವೇ ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳು ಅವರು ವಾಸಿಸುತ್ತಿದ್ದ ಮನೆಗೆ ಧಾವಿಸಿದರು. ಅಧಿಕಾರಿಗಳು ಹಾಗೂ ಅವರ ಜೊತೆಗೆ ಬಂದಿದ್ದ ಸರ್ಕಾರಿ ವಾಹನಗಳ ಭರಾಟೆ ನೋಡಿ, ಮನೆಯ ಮಾಲೀಕ ಅವಕ್ಕಾಗುತ್ತಾನೆ. ಆಗ ತನಿಗೆ ತಿಳಿಯುತ್ತದೆ. ತನ್ನ ಮನೆಯಲ್ಲಿ ಬಾಡಿಗೆಗೆ ಇದ್ದ ವೃದ್ಧ ಬೇರಾರೂ ಅಲ್ಲ. ಅವರು ಮಾಜಿ ಪ್ರಧಾನಿ ಗುಲ್ಜಾರಿಲಾಲ್ ನಂದಾ ಎಂದು. ತಕ್ಷಣ ಆತ ತನ್ನನ್ನು ಕ್ಷಮಿಸುವಂತೆ ಗುಲ್ಜಾರಿಲಾಲ್ ನಂದಾ ಅವರು ಕಾಲು ಹಿಡಿಯುತ್ತಾನೆ.

ಅಧಿಕಾರಿಗಳು ನಂದಾ ಅವರಿಗೆ ಸರ್ಕಾರಿ ನಿವಾಸ ಹಾಗೂ ಸರ್ಕಾರಿ ಸವಲತ್ತು ಪಡೆಯಲು ವಿನಂತಿಸಿಕೊಳ್ಳುತ್ತಾರೆ. ಆದರೆ ಗುಲ್ಜಾರಿಲಾಲ್ ನಂದಾ ಅವರು ಅಷ್ಟೇ ನಯವಿನಯದಿಂದ ತಿರಸ್ಕರಿಸುತ್ತಾರೆ. ತಮ್ಮ ಕೊನೆಯ ಉಸಿರು ಇರುವವರೆಗೂ ಅವರು ಓರ್ವ ಸಾಮಾನ್ಯ ನಾಗರೀಕನಂತೆ ಜೀವನ ಕಳೆಯುತ್ತಾರೆ.

1997ರಲ್ಲಿ ಅವರಿಗೆ " ಭಾರತ ರತ್ನ " ನೀಡಿ ಗೌರವಿಸಲಾಯಿತು.

ಅವರ ಜೀವನದ ತುಲನೆ ಇಂದಿನ ರಾಜಕಾರಣಿಗಳ ಜೊತೆಗೆ ಎಳ್ಳಷ್ಟೂ ಆಗುವುದಿಲ್ಲ.

ಅವರು ನಮ್ಮನ್ನು ಅಗಲಿ ಇಂದಿಗೆ 23 ವರ್ಷಗಳಾದವು.

–ನೀಲಕಂಠ ದಾತಾರ

# ನಮ್ಮ ಭವ್ಯ ಭಾರತ

ಎನಿತು ಸುಂದರ ನಮ್ಮ ಭಾರತ
ಭವ್ಯ ಸಂಸ್ಕೃತಿ ತೋರುತ ದಿವ್ಯ ಶಕ್ತಿಯ ಬೀರುತ
ಎಲ್ಲರ ಮನೆ ಮನ ತಾಗಿ ಗಗನದಂಚಿಗೇರುತ
ಸಾರುತಿಹಳು ಭಾರತಿ ಸರ್ವರೊಂದುಗೂಡಿರೆನ್ನುತಾ

ನದಿ ಸಾಗರ ಬೆರೆಯುವಂತೆ ಮೇರುಮೆಟ್ಟಿಲೇರುತ
ಆನರ ಮನಕೆ ಬಿತ್ತಿಹಳು ದೇಶ ಭಕ್ತಿ ಸಾರೆನುತಾ
ನವಭಾರತಕೆ ಸಾಕ್ಷಿಯಾಗಿ ಕಣ್ಣಕಾಂತಿ ಬೀರುತ
ವಿದೇಶಿಗರು ತಿರುಗಿ ನೋಡುವಂತೆ ನಮ್ಮತ್ತ

ಉಸುರುತಿಹಳು ಭಾರತಾಂಬೆ ತೋರಿರೆಲ್ಲ ಒಮ್ಮತ
ನಮ್ಮ ಗೌಪ್ಯ ಒಡವೆಯೇ ಕರುಣೆಯೇ ನಮ್ಮ ಕಣ್ಣೆನುತ
ತರತರದ ಕಲೆಯ ಆಗರವಾಗಿಹಳು ನಮ್ಮ ಭಾರತಿ
ಪರಿತಪಿಸುತಿಹ ಮನದ ದುಗುಡ ದೂಡುತ
ಇಂಗು ತಿಂದ ಮಂಗನಂತೆ ಮಾಡಿದ್ದರು ಆಂಗ್ಲರು
ಮಣ್ಣು ಮುಕ್ಕಿರೆಂದು ಹೋರಾಡಿದರು ದಿವ್ಯತೇಜರು
ನಮ್ಮ ತನದ ಪರಮಪಾವನ ಬಾವುಟವ ನೆಟ್ಟರು
ಸ್ವಾತಂತ್ರ್ಯ ದಿನವ ಸಡಗರದಿ ಆಚರಿಸಿದರು

ಸತ್ಯ ಶಾಂತಿ ತ್ಯಾಗವು ನಮ್ಮ ತಿರಂಗ ಮಂತ್ರವು
ಮಧ್ಯೆ ನೀಲಿವರ್ಣದೆ ಶೋಭಿಸಿಹುದು ಅಶೋಕ ಚಕ್ರವ
ಶಾಲೆ, ಸರ್ಕಾರಿ ಕಛೇರಿಯಲ್ಲಿ ಆಚರಿಸುತ್ತಿದ್ದೆವು
ಮೋದಿಯಣ್ಣನ ದಯದೆ ಮನೆಯ ಮೇಲೆ ಬಾವುಟವು
ಸಂಭ್ರಮ ಸಡಗರದೆ ಆಚರಿಸುವ ಸ್ವತಂತ್ರೋತ್ಸವ
ವರುಷ ವರುಷವು ಹರುಷ ತರಲಿ ಈ ದಿವ್ಯ ಉತ್ಸವ
ಹಾರುತಿಹ ಬಾವುಟಕೆ ನಾಲ್ಕು ಬೆರಳ ನೊಕಿರಿಸಿ ಎದೆ ಎತ್ತಿ ನಿಲ್ಲುವ
ಭವ್ಯ ದಿವ್ಯ ಬಾವುಟದ ಹೊಂಬೆಳಕಲಿ ಮುನ್ನಡೆವ

ಸರ್ವರಿಗೂ ಸ್ವಾತಂತ್ರೋತ್ಸವದ ಶುಭಾಶಯಗಳು

–ವಿಜಯ ಲಕ್ಷ್ಮಿ ಕೊಡಿಯಾಲ

## ಅರಿತು ಬಾಳಿದ ಯೋಗಿ

ಅರಿತದ್ದನ್ನು ಅಂದುಕೊಂಡಂತೆ
ಛಲಬಿಡದೆ ಸಾಧಿಸಿದವರು
ನಂದಾದೀಪದಂತೆ ಪ್ರಕಾಶಿಸಿದ ಜ್ಞಾನ ಜ್ಯೋತಿ ನೀವು
ತನ್ನದೆಲ್ಲವನ್ನು ತೊರೆದ ನಿಸ್ವಾರ್ಥ ಹೃದಯಿ
ಕುಳಿತ ಭಂಗಿಯ ತೋರುವುದು ಮಹಾತ್ಮರನು
ಮಾಡು ಇಲ್ಲವೇ ಮಡಿ ಎನ್ನುವಂತೆ ನಡೆದವರು
ರಂಗು ಚೆಲ್ಲಿದರು ಅನಾಥರ ಅಜ್ಞಾನಿಗಳ ಬಾಳಿನಲ್ಲಿ
ಸ್ವಾರ್ಥ ಬಿಟ್ಟು ನಿಷ್ಕಲ್ಮಶ ಹೃದಯದಿ ದುಡಿದವರು
ಮೀರಲಿಲ್ಲ ನೀವು ಎಂದಿಗೂ ತೊಟ್ಟ ಗುರಿಯನ್ನು
ಜಿಲ್ಲೆಯ (ಮಂಡ್ಯ) ಸಾಧನೆಗೆ
ನಿಮ್ಮದೊಂದು ಅಪಾರ ಕೊಡುಗೆ.

ಶ್ರೀಮತಿ ಶೋಭಾ ನಾಗಭೂಷಣ್
ಶಿಕ್ಷಕಿ, ಕವಯಿತ್ರಿ ಹಾಗೂ ನಿರೂಪಕಿ

# ಬದುಕು ಮತ್ತು ಬರವಸೆ

ಚಳಿಗಾಲದ ಒಂದು ರಾತ್ರಿ.

ಶ್ರೀಮಂತನೊಬ್ಬ ಹೊರಗೆ ಕುಳಿತಿದ್ದ.

ಒಬ್ಬ ಬಡ ಮುದುಕನನ್ನು ಕಂಡು ಹತ್ತಿರ ಹೋಗಿ ಕೇಳುತ್ತಾನೆ..

ಚಳಿ ಆಗುವುದಿಲ್ಲವೇ ನಿಮಗೆ ಚಳಿಯಲ್ಲೇ ಕುಳಿತುಕೊಂಡಿದ್ದೀರಿ ಜೊತೆಗೆ ಸ್ವೆಟರ್ ಕೂಡ ಹಾಕಿಲ್ಲವಲ್ಲ. ಎಂದು...

ಮುದುಕ ಹೇಳುತ್ತಾನೆ ನನ್ನ ಹತ್ತಿರ ಸ್ವೆಟರ್ ಇಲ್ಲ. ಅಲ್ಲದೆ ಚಳಿ ನನಗೆ ಅಭ್ಯಾಸವಾಗಿದೆ.

ಶ್ರೀಮಂತ ಹೇಳುತ್ತಾನೆ ಸ್ವಲ್ಪ ಹೊತ್ತು ಇರು ನಾನು ಮನೆಗೆ ಹೋಗಿ ನಿನಗೆ ಸ್ವೆಟರ್ ತರುತ್ತೇನೆ ಎಂದು

ಆ ಬಡ ಮುದುಕನಿಗೆ ಖುಷಿಯಾಗುತ್ತೆ.

ಸರಿ ಬನ್ನಿ ಕಾಯುತ್ತೇನೆ ಎಂದು ಹೇಳುತ್ತಾನಲ್ಲದೆ ಶ್ರೀಮಂತನಿಗಾಗಿ ಕಾಯುತ್ತಾ ಅಲ್ಲೆ ಕೂರುತ್ತಾನೆ. ಮನೆಗೆ ಹೋದ ಶ್ರೀಮಂತ ಮುದುಕನಿಗೆ ಹೇಳಿದ್ದ ಮಾತು ಮರೆತು.., ತನ್ನ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಾನೆ.

ಶ್ರೀಮಂತನಿಗೆ ಮುಂಜಾನೆ ಎದ್ದಾಗ ಆ ಬಡ ಮುದುಕ ಮತ್ತು ಅವನಿಗೆ ಕೊಟ್ಟ ಮಾತು ನೆನಪಾಗಿ ಕೂಡಲೇ ಮುದುಕನಿದ್ದಲ್ಲಿಗೆ ಹೋಗುತ್ತಾನೆ. ಆದರೆ ಮುದುಕ ಚಳಿ ತಾಳಲಾರದೆ ಸತ್ತು ಹೋಗಿರುತ್ತಾನೆ.

ಆದರೆ, ಸತ್ತ ಆ ಮುದುಕನ ಕೈಯಲ್ಲೊಂದು ಪತ್ರವನ್ನು ಕಂಡು ಶ್ರೀಮಂತ ವ್ಯಕ್ತಿ ಆ ಪತ್ರ ತೆರೆದು ಓದುತ್ತಾನೆ.

ಚಳಿ ತಡೆಯಲು ನನ್ನ ಬಳಿ ಬೆಚ್ಚನೆಯ ಬಟ್ಟೆಯಿಲ್ಲದಿದ್ದಾಗ, ನಾನು ಚಳಿಯನ್ನು ಸಹಿಸುವ ದೃಢವಾದ ಮಾನಸಿಕ ಶಕ್ತಿಯನ್ನು ಹೊಂದಿದ್ದೆ.. ಆದರೆ, ನೀವು ನನಗೆ ಚಳಿ ತಡೆಯಲು ಸ್ವೆಟರ್ ನೀಡುತ್ತೇನೆ ಎಂದಾಗ ಚಳಿ ತಡೆಯಲು ಸ್ವೆಟರ್ ದೊರಕುತ್ತದೆ ಎಂಬ ಆಸೆಯೂ ನನ್ನಲಿದ್ದ ಮಾನಸಿಕ ಶಕ್ತಿಯನ್ನು ಕಸಿದುಕೊಂಡಿತು. ನೀವು ನೀಡಿದ ಭರವಸೆಯನ್ನಾದರೂ ಯಾಕೆ ನೀಡಬೇಕು.

ನೀವು ನೀಡಿದ ಭರವಸೆ ನಮಗೆ ಅಷ್ಟು ಮುಖ್ಯವಲ್ಲದಿರಬಹುದು. ಆದರೆ, ಅದನ್ನು ನಂಬಿದ ನನ್ನಂತವರಿಗೆ ತುಂಬಾ ಮುಖ್ಯವಾಗಿರುತ್ತದೆ.

–ಸಂಗ್ರಹ

# ಗೋವಿಂದ ಸಭಾಂಗಣ ತಿರುಪತಿ




ವೆಂಕಟನಾಥನ ದಿವ್ಯ ಸನ್ನಿಧಿ
ನೀಡಿತು ಮನಸಿಗೆ ನೆಮ್ಮದಿಯ
ಸಂಕಟ ದೂರಕೆ ನೀಗಲು ಬನ್ನಿ
ಗೋವಿಂದನ ಸಭೆಯ ಅಂಗಣಕೆ
ದಾದಾ ಸ್ವಾಮಿಯ ಆಶೀರ್ವಚನದಿ
ತಿರುಪತಿ ದೇವನ ನೆನವರಿಕೆ
ತಿರುಪತಿ ದಿವ್ಯತೆ ಲಭ್ಯವ ದಿಲ್ಲಿ
ವಿಧ ವಿಧ ಸಭೆಗಳ ಕಾರ್ಯದಲಿ
ಧ್ಯಾನದ ಕಲಿಕೆ ನೆಲೆಸಲು ಮನದಿ
ವೆಂಕಟೇಶನ ಸನ್ನಿದಿಯು

ದೂರದೂರಿನ ಭಕುತರು ನೀಡುವ
ಹಾರೈಕೆಯ ಶುಭ ಹರಕೆ
ವೆಂಕಟೇಶನ ನಾಟ್ಯ ನಾಟಕ
ವರ್ಣನೆ ಮನದಲಿ ನಿಚ್ಚಲವು
ನಮ್ಮಯ ಮನಗಳೆ ನಮಗರಿವಿಲ್ಲದೆ
ತಿರುವನು ಪಡೆವವು ತಿರುಪತಿಗೆ
ನೆಲಸಿರೆ ಮಂಡ್ಯದಿ ತಿರುಪತಿನಾಥನೆ
ಕೈ ಹಿಡಿದೆಮ್ಮನು ನಡೆಸುವನು

–ಎಂ ಕೆ ಶಂಕರನಾರಾಯಣ ಭಟ್ಟರು, ಮಂಡ್ಯ

# ದೇಶದ ಬೆನ್ನೆಲುಬಂತೆ ಇವನು?



ಹೊಲ–ಗದ್ದೆಯೊಳು ಅಡ್ಡಾಡುವವನೇ ರೈತ
ಬೆಳೆಗಳಿಗೆ ಗೊಬ್ಬರ–ನೀರಿಲ್ಲ ಅಂತ

ಬಾನ ನೋಡುತ್ತಾನ
ಬಿರು ಬಿಸಿಲ ಸಹಿಸುತಾನ
ಬೆಳೆಯ ಮೈಯನ್ನೆಲ್ಲಾ ಮಕ್ಕಳಂತೆ ಸವರುತ್ತಾನ
ನೊಂದಿರುವ ಬೆಳೆಯ ನೋಡಿ
ಮನದಲ್ಲೇ ಮರಗುತ್ತಾನ

ಚಿನ್ನದಂತ ಬೆಳೆಗೆ
ತುಪ್ಪದಂತ ನೀರ ಹಾಯಿಸಿ
ಹಗಲು–ರಾತ್ರಿ ಅನ್ದೆ ಕಾಯ್ದು
ನಿದ್ರೆಗೆಟ್ಟು ಕುಯ್ಲು – ಕುಯ್ದು
ಮಾರ್ಕೆಟ್‌ಗಂತ ತಂದ್ರೆ
ದಲ್ಲಾಳಿಗಳಿಂದ ತಪ್ಪಿದಲ್ಲ ತೊಂದ್ರೆ

ಮಕ್ಕಳ ಓದುಸ್ಬೇಕಂತ
ಕಂಡ – ಕಂಡವರ ಕಾಲ ಹಿಡಿಯುತಾನ ಮಕ್ಕಳೇ ಆಸ್ತಿ ಎಂದು
ಕನಸು ಕಾಣುತ್ತಾನ
ಲವ್ವಲ್ಲಿ ಬಿದ್ದ ಮಕ್ಕಳು
ಎದೆಗೆ ಚೂರಿ ಇರಿಯುತ್ತಾರ

ಹೊಟ್ಟೆ–ಬಟ್ಟೆ ಕಟ್ಟಿ
ಸಾಲ ತೀರಿಸೊಕ್ಕಂತ
ಭಂಡವಾಳವೇ ಕೈಗೆ ಬರದೇ
ಮುಂದೆ ಮಾಡೋದೆಂತ
ಮದುವೆ – ಮುಂಗಂತ
ಮತ್ತೆ ಸಾಲ ಮಾಡುತ್ತಾನೆ ಈತ

ಅತಿವೃಷ್ಟಿ – ಅನಾವೃಷ್ಟಿಯಲ್ಲೂ
ಬಿಡನು ಭೂಮಿ ತಾಯ
ನೆತ್ತರೆಂಬ ಬೆವರ ಸುರಿಸಿ
ಮಣ್ಣಲ್ಲೇ ಮಣ್ಣಾಗುವಾತ
ಇವನೇ ನಮ್ಮ ರೈತ ಸುಖವ ಕಾಣದಾತ

ಸಾಲದೋರು ಎಳೆಯುವಾಗ
ಮಾನ ಕಳೆಯುವಾಗ
ಇದ್ದ ಭೂಮಿ ಮಾರಿ ಬಿಟ್ಟು
ಗುಳೆ ಹೊರಡುತ್ತಾನೆ ಪ್ಯಾಟೆಯತ್ತ
ಮನದಲ್ಲೇ ನೊಂದು ಬೆಂದು
ಸಾಯ್ತಾನೆ ಕೇಳೋರಿಲ್ಲಂತ

ದೇಶದ ಬೆನ್ನೆಲುಬು ಈತ !

ಉಮಾ ಜೆ., ಶಿಕ್ಷಕರು,
ಅಭಿನವ ಭಾರತಿ ವಿದ್ಯಾ ಕೇಂದ್ರ(ಕನ್ನಡ ಮಾಧ್ಯಮ), ಮಂಡ್ಯ.

# ಎಲ್ಲ ಮಿತ್ರರೂ ಮುಪ್ಪಾಗುತ್ತಿದ್ದಾರೆ

ಎಲ್ಲ ಮಿತ್ರರೂ ಮುಪ್ಪಾಗುತ್ತಿದ್ದಾರೆ
ನಿಧಾನಕ್ಕೆ ನಡೆಯುತ್ತಿದ್ದಾರೆ ನನ್ನ ಹಾಗೇ
ಹರೆಯದಲ್ಲಿ ಮಿಂಚುತ್ತಿದ್ದ ಪಟ್ಟುಗಳೆಲ್ಲ
ಈಗ ಮಾಯವಾಗಿವೆ
ಯಾರಿಗೋ ಬೊಜ್ಜು ಬಂದಿದೆ
ಇನ್ಯಾರಿಗೋ ಕೂದಲು ಹಣ್ಣಾಗುತ್ತಿವೆ.





ಎಲ್ಲರ ತಲೆಯ ಮೇಲೆ ಜವಾಬ್ದಾರಿ
ಎಲ್ಲರಿಗೂ ಸಣ್ಣ ಪುಟ್ಟ ಅಜಾರಿ
ಯಾರಿಗೋ ದೇಹದ ನೋವು
ಯಾರಿಗೋ ಮನದ ಅಳಲು
ದಿನವಿಡೀ ಓಡುತ್ತಿದ್ದವರು
ಈಗ ನಡೆಯುವಾಗಲೂ ದಣಿವಾರಿಸಿಕೊಳ್ಳುತ್ತಿದ್ದಾರೆ.

ಯಾರಿಗೂ ಸಮಯವಿಲ್ಲ
ಎಲ್ಲರ ಕಣ್ಣಲ್ಲೂ ನೋವಿನ ಛಾಯೆ
ಎಲ್ಲರಿಗೂ
ಅಪ್ಪನನ್ನು ಇನ್ನಷ್ಟು ಆರೈಕೆ ಮಾಡಬೇಕಿತ್ತು
ಕೊನೆಯ ದಿನಗಳಲ್ಲಿ ಅಮ್ಮನ ಸೇವೆ ಮಾಡಬೇಕಿತ್ತು.
ಹೆಂಡತಿಯನ್ನು ಇನ್ನು ಪ್ರೀತಿಸಬೇಕಿತ್ತು.. ಅವಳೊಂದಿಗೆ
ಸಮಯ ಕಳೆಯಬೇಕಿತ್ತು
ಮಕ್ಕಳಿಗೆ ಸಮಯ ಕೊಡಬೇಕಿತ್ತು
ಆ ಮಿತ್ರನೊಂದಿಗೆ ಪರಲು ಹರಿದುಕೊಳ್ಳಬಾರದಿತ್ತು
ಎಂಬ ಏನೇನೋ ಹಳವಂಡಗಳು
ಕಾಡುತ್ತವೆ.
ಅಂತೂ ಇಷ್ಟಾದರೂ ಸಾಧಿಸಿದೆನಲ್ಲ
ಎಂಬ ನೆಮ್ಮದಿಯೂ ಇದೆ
ಹಳೆಯ ಭಾವಚಿತ್ರಗಳ ನೋಡಿ
ಈಗಲೂ ಮನಸ್ಸು ತುಂಬಿ ಬರುತ್ತದೆ
ಈ ಸಮಯವೂ ಎಂಥ ವಿಚಿತ್ರ ನೋಡಿ!
ಹೇಗೆ ಸವೆದು ಹೋಗುತ್ತದೆ
ನಿನ್ನೆಯ ನವಯುವಕ ನನ್ನ ಮಿತ್ರ
ಇಂದು ವೃದ್ಧನಂತೆ ಕಾಣುತ್ತಾನೆ ಒಂದೊಮ್ಮೆ ಕನಸು
ಕಾಣುತ್ತಿದ್ದವರು
ಗತಿಸಿದ ದಿನಗಳಲ್ಲಿ ಕಳೆದು ಹೋಗಿದ್ದಾರೆ

ಆದರೆ ಇದು ಪರಮ ಸತ್ಯ!
ಎಲ್ಲಾ ಮಿತ್ರರೂ ಹಣ್ಣಾಗುತ್ತಿದ್ದಾರೆ.
ಮಿತ್ರರೇ,
ಮುಂದೆ ಸಮಯದ ಲಯ
ಇನ್ನೂ ತೀವ್ರವಾಗಲಿದೆ.
ಈಗ ಉಳಿದ ಬದುಕೇ 'ಬಹುಮಾನ'
ಆದ್ದರಿಂದ,
ಮಾಡುವುದನ್ನು ಮಾಡಿ ಮುಗಿಸಿ
ಕೊಡುವುದನ್ನು ಕೊಟ್ಟು ಮುಗಿಸಿ
ನಿರಾಳ ಮನಸ್ಸಿನಿಂದ ಬದುಕಿ
ಮನಸ್ಸಿನ ಆಸೆಗಳನ್ನು
ಬಚ್ಚಿಟ್ಟು ಕೊರಗದಿರಿ
ಪ್ರತಿಯೊಬ್ಬ ಹಳೆಯ ಮಿತ್ರ
'ಕೊಹಿನೂರ್ ವಜ್ರ'
ಹಳೆಯ ಮಿತ್ರರೊಂದಿಗೆ
ಬದುಕಿನ ಕೊನೆಯ ತುಣುಕು
ನಗುನಗುತ್ತ ಕಳೆಯಿರಿ
ಎಲ್ಲಾ ಮಿತ್ರರಿಗೂ ಸಮರ್ಪಣೆ......

–ಸಂಗ್ರಹ

# ಕಾಲ



ಸಣ್ಣವರಿದ್ದಾಗ
ಜೇಬಿನಲ್ಲಿ
ಚಿಲ್ಲರೆ ಕಾಸು ಇರುತ್ತಿತ್ತು
ದೊಡ್ಡವರಾದ ಮೇಲೆ ಚಿಲ್ಲರೆ ಯೋಚನೆಗಳು ಬರುತ್ತಿವೆ

ಸಣ್ಣವರಿದ್ದಾಗ ಹಣ ಕದ್ದರೆ ದೇವರು ನೋಡುತ್ತಾನೆಂದು ಹೆದರುತ್ತಿದ್ದೆವು
ದೊಡ್ಡವರಾದ ಮೇಲೆ ಅಕ್ರಮ ಹಣ ತಿಂದು ದೇವರಿಗೆ ಅರ್ಪಿಸುತ್ತಿದ್ದೇವೆ

ಸಣ್ಣವರಿದ್ದಾಗ ಸಹೋದರ– ಸಹೋದರಿಯರ ಜೊತೆಗೆ, ಜಗಳ ಆಡಿ, ಒಂದಾಗುತ್ತಿದ್ದೇವು
ಈಗ ಆಸ್ತಿಗಾಗಿ ಬೇರೆ ಬೇರೆ ಆಗುತ್ತಿದ್ದೇವೆ ,ಕೋರ್ಟ್ ಕಛೇರಿ ಅಲೆಯುತ್ತಿದ್ದೇವೆ

ಸಣ್ಣವರಿದ್ದಾಗ ಬಟ್ಟೆಗಳು ಮಸಿಯಾಗಿದ್ದವು
ಮನಸ್ಸು ಶುಭ್ರವಾಗಿತ್ತು
ದೊಡ್ಡವರಾದ ಮೇಲೆ ಬಟ್ಟೆಗಳು ಶುಭ್ರವಾಗಿವೆ
ಮನಸ್ಸು ಮಸಿಯಾಗಿದೆ

ಸಣ್ಣವರಿದ್ದಾಗ ಸುಮ್ಮ ಸುಮ್ಮನೆ ನಗುತ್ತಿದ್ದೆವು
ದೊಡ್ಡವರಾದ ಮೇಲೆ ಹಣ ಕೊಟ್ಟು ನಗಲು ಆಗುತ್ತಿಲ್ಲ

ಸಣ್ಣವರಿದ್ದಾಗ ಮೈ ಮೇಲೆ ಗಾಯ ಆಗುತ್ತಿದ್ದವು
ದೊಡ್ಡವರಾದ ಮೇಲೆ ಮನಸ್ಸಿನ ಮೇಲೆ ಗಾಯಗಳಾಗಿವೆ

ಸಣ್ಣವರಿದ್ದಾಗ ಶಾಲೆ ಪಾಟಿ ಚೀಲ ಬಾರ ಇರುತ್ತಿತ್ತು
ದೊಡ್ಡವರಾದ ಮೇಲೆ ಚಿಂತೆಗಳು ,ಯೋಚನೆಗಳು ಭಾರವಾಗಿವೆ

ಸಣ್ಣವರಿದ್ದಾಗ ಮಳೆಯಲ್ಲಿ ನೆನೆಯುತ್ತಿದ್ದೆವು
ದೊಡ್ಡವರಾದ ಮೇಲೆ ಬೆವರು, ಕಣ್ಣೀರಿನಲ್ಲಿ ನೆನೆಯುತ್ತೇವೆ
ಸಣ್ಣವರಿದ್ದಾಗ ಕೆರೆ ಬಾವಿಯಲ್ಲಿ ಮೋಜು ಮಸ್ತಿಯಿಂದ ಈಜಾಡುತ್ತಿದ್ದೆವು
ದೊಡ್ಡವರಾದ ಮೇಲೆ ಜೀವನ ಸಾಗರದಲ್ಲಿ ಗೋಳಾಡುತ್ತೇವೆ
ಸಣ್ಣವರಿದ್ದಾಗ ಗುಣ ನೋಡಿ ಗೆಳೆತನ ಮಾಡುತ್ತಿದ್ದೆವು
ದೊಡ್ಡವರಾದ ಮೇಲೆ ಹಣ,ಲಾಭಕ್ಕಾಗಿ
ಲೆವೆಲ್ ನೋಡಿ ಗೆಳೆತನ
ಮಾಡುತ್ತೇವೆ
ಸಣ್ಣವರಿದ್ದಾಗ ತೊದಲು
ನುಡಿಗಳು ಜನರಿಗೆ ಅರ್ಥ ಆಗುತ್ತಿದ್ದವು
ದೊಡ್ಡವರಾದ ಮೇಲೆ ಹೇಗೆ ಮಾತನಾಡಿದರೂ ತಪ್ಪಾಗಿ ಅರ್ಥೈಸಲಾಗುತ್ತದೆ

ಸಣ್ಣವರಿದ್ದಾಗ ಸುಳ್ಳು ಹೇಳಿದರೆ, ಗುರುಗಳು ,ಹೆತ್ತವರು ಹೊಡೆಯುತ್ತಿದ್ದರು...
ದೊಡ್ಡವರಾದ ಮೇಲೆ ಸತ್ಯ ಹೇಳಿದರೆ ಶಿಕ್ಷೆಗೆ ಗುರಿಯಾಗುವೆವು

ಸಣ್ಣವರಿದ್ದಾಗ ಗಣಿತ ವಿಜ್ಞಾನ ತಿಳಿಯುತ್ತಿದ್ದಿಲ್ಲ
ದೊಡ್ಡವರಾದ ಮೇಲೆ ಸಮಾಜ ತಿಳಿಯುತ್ತಿಲ್ಲ
ಸಣ್ಣವರಿದ್ದಾಗ ಎಲ್ಲರ ಜೊತೆಗೆ ಬೆರೆಯುತ್ತಿದ್ದೆವು
ದೊಡ್ಡವರಾದ ಮೇಲೆ ಜಾತಿ ,ಧರ್ಮ
ನೋಡಿ ಬೆರೆಯುತ್ತೇವೆ
ಸಣ್ಣವರಿದ್ದಾಗ ಸ್ನೇಹ ಸಂಬಂಧಗಳಿಗೆ ಬೆಲೆ ಇತ್ತು
ದೊಡ್ಡವರಾದ ಮೇಲೆ ಆಸ್ತಿ ಅಂತಸ್ತಿಗೆ ಮಾತ್ರ ಬೆಲೆ ಇದೆ
ಸಣ್ಣವರಿದ್ದಾಗ ಅರಿವಿಲ್ಲದ ಅರಿವು ಇತ್ತು
ದೊಡ್ಡವರಾದ ಮೇಲೆ ಅರಿವಿದ್ದರೂ ಅರಿವುಗೇಡಿಗಳಾಗಿದ್ದೆವೆ

ಸಣ್ಣವರಿದ್ದಾಗ ವಿಶ್ವ ಮಾನವರಾಗಿದ್ದೆವು
ದೊಡ್ಡವರಾದ ಮೇಲೆ ಅಲ್ಪ ಮಾನವರಾಗಿದ್ದೇವೆ.
ಬದಲಾವಣೆ ನಮ್ಮಿಂದ ಸಾಧ್ಯ . . . ಪ್ರಯತ್ನಿಸೋಣ

–ಸಂಗ್ರಹ

[redacted]





# ಶೀರ್ಷಿಕೆ – ಮಹಿಳೆಯೊಬ್ಬಳು ಸಾಕು

ಸಂಸ್ಕಾರ ಕಲಿಯುವುದು
ಮನೆಯಂಗಳದಲ್ಲಿ
ಮೊದಲ ಗುರು ತಾಯ
ಮಡಿಲಲ್ಲಿ
ದಾರಿ ತಪ್ಪಲು ಅವಕಾಶವಿನ್ನೆಲ್ಲಿ?

ಪಾಠ ಕಲಿಸಿದ ಗುರು
ಅಜ್ಞಾನವ ತೊಡೆಯುವರು
ವಚನಾಮೃತ ಸಾರ
ಎಲ್ಲರಿಗೂ ಉಣಬಡಿಸಿ
ಆಧ್ಯಾತ್ಮ ಧರ್ಮಗುರು
ಕೈಹಿಡಿದು ನಡೆಸಿಹರು

ಮೂಢ ನಂಬಿಕೆ ತೊರೆದು
ದುಷ್ಚಟದಿ ದೂರವಿರೆ
ನೆರಳಾಗುವುದು ಉತ್ಕೃಷ್ಟ ಜ್ಞಾನ
ಸಾಮಾಜಿಕ ಕಳಕಳಿ
ಮೈಗೂಡಿಸಿಕೊಂಡು
ಸಾತ್ವಿಕ ಮಾರ್ಗದಲಿ ನಡೆಯೋಣ ಜಾಣ!

ನಿತ್ಯ ಯೋಗ ಧರ್ಮ
ಪಾಲನೆ ಹಾದಿ ಸತ್ಯ
ಸುಸಂಸ್ಕೃತ ಸಮಾಜಕ್ಕೆ
ಆಧ್ಯಾತ್ಮ ಚಿತ್ತ
ಅಮರವೀ ಪ್ರಾಚೀನ
ಸಾತ್ವಿಕ ತಿಳಿದಿರಲಿ
ಉಳಿದೆಲ್ಲ ಮಿಥ್ಯ !

ಬದಲಾಗಬೇಕಿದೆ ಈಗ
ವಿಷಮ ಸಮಾಜ
ಜಾತಿಮತ ತಾರತಮ್ಯ ಬೇಡ ಮೆಟ್ಟಿ ನಿಂತು ದೌರ್ಬಲ್ಯ
ಕಟ್ಟೋಣ ಧೀಮಂತ ಸಂಸ್ಕೃತಿಯ
ಸಮಾನತೆಯ ನಾಡ!

ಒಬ್ಬ ಓದಿದ ಮಹಿಳೆ ಸಾಕು
ಬದಲಿಸಬಹುದು ಸಮಾಜ
ಅವಳೇ ಸಮಾಜದ ಸರಸ್ವತಿ
ಭಾಚನಾತ್ಮಕ, ಸಾಂಸ್ಕೃತಿಕ
ಶ್ರೇಷ್ಠ ವ್ಯಕ್ತಿಯ ಸೃಷ್ಟಿಸಬಲ್ಲ ಪ್ರಕೃತಿ !


ನಿರಂತರ ಯೋಗ,ಧ್ಯಾನ
ಧರ್ಮಪಾಲನೆಯ ಹಾದಿ
ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ
ಸತ್ಯ ಮುನ್ನೆಲೆಯಲ್ಲಿ ಆಧ್ಯಾತ್ಮ
ಬೆನ್ನೆಲುಬಾಗಿ ದೊರೆತಿರಲು
ಸೆಟೆದೆದ್ದು ನಿಲ್ಲಬೇಕು
ನಮ್ಮ ಯುವ ಜನತೆ !



ಶ್ರೀಮತಿ ಕುಸುಮಾ.ಜಿ.ಭಟ್
ಸಾಗರ, ಶಿವಮೊಗ್ಗ

# ಮಳೆ ಬಂದಂಗೆ ಛತ್ರಿ ಹಿಡಿ; ಸಮಯಕ್ಕೆ ತಕ್ಕ ದಾರಿಹಿಡಿ

1998 ರಲ್ಲಿ, ಕೋಡಾಕ್‌ನಲ್ಲಿ1,70,000 ಉದ್ಯೋಗಿಗಳು ಕೆಲಸ ಮಾಡುತ್ತಿದ್ದರು ಮತ್ತು ಅವರು ವಿಶ್ವದ 85% ಫೋಟೋಫಿಲಂಗಳನ್ನು ಮಾರಾಟ ಮಾಡುತ್ತಿದ್ದರು. ಕೆಲವೇ ವರ್ಷಗಳಲ್ಲಿ, ಡಿಜಿಟಲ್ ಫೋಟೋಗ್ರಫಿ ಅವರನ್ನು ಮಾರುಕಟ್ಟೆಯಿಂದ ಹೊರ ಹಾಕಿತು. ಕೊಡಾಕ್ ದಿವಾಳಿಯಾಯಿತು ಮತ್ತು ಅದರ ಎಲ್ಲಾ ಉದ್ಯೋಗಿಗಳು ರಸ್ತೆಗೆ ಬಂದರು.




HMT (ವಾಚ್)
ಬಜಾಜ್ (ಸ್ಕೂಟರ್)
ಮರ್ಫಿ (ರೇಡಿಯೋ)
ನೋಕಿಯಾ(ಮೊಬೈಲ್)
ರಾಜ್‌ದೋಲ್(ಬೈಕ್)
ಅಂಬಾಸಿಡರ್ (ಕಾರು)
ದಿನೇಶ್ (ಬಟ್ಟೆ)
ಸ್ನೇಹಿತರೇ,

ಈ ಎಲ್ಲದರ ಗುಣಮಟ್ಟದಲ್ಲಿ ಯಾವುದೇ ಕೊರತೆ ಇರಲಿಲ್ಲ, ಆದರೂ ಅವು ಮಾರುಕಟ್ಟೆಯಿಂದ ಹೊರಬಿದ್ದವು!! ಕಾರಣ?

ಕಾಲಕ್ಕೆ ತಕ್ಕಂತೆ ಅವು ಬದಲಾಗಲಿಲ್ಲ.!!

ಮುಂಬರುವ 10 ವರ್ಷಗಳಲ್ಲಿ ಪ್ರಪಂಚವು ಸಂಪೂರ್ಣವಾಗಿ ಬದಲಾಗುತ್ತದೆ ಮತ್ತು ಒಂದು ನಡೆಯುತ್ತಿರುವ 70% ರಿಂದ 90% ಕೈಗಾರಿಕೆಗಳು ಸ್ಥಗಿತಗೊಳ್ಳುತ್ತವೆ.

ಉಬರ್ ಕೇವಲ ಸಾಫ್ಟ್‌ವೇರ್ ಆಗಿದೆ. ತನ್ನದೇ ಆದ ಒಂದು ಕಾರು ಹೊಂದಿಲ್ಲದಿದ್ದರೂ, ಅವರು ವಿಶ್ವದ ಅತಿದೊಡ್ಡ ಟ್ಯಾಕ್ಸಿ ಕಂಪನಿ.

ಏರ್‌ಬ್ನಬಿ ತಮ್ಮದೇ ಆದ ಹೋಟೆಲ್ ಹೊಂದಿಲ್ಲದಿದ್ದರೂ ವಿಶ್ವದ ಅತಿದೊಡ್ಡ ಹೋಟೆಲ್ ಕಂಪನಿಯಾಗಿದೆ.

Paytm, ola cabs, oyo ಕೊಠಡಿಗಳಂತಹ ಅನೇಕ ಉದಾಹರಣೆಗಳಿವೆ.

ಯುಎಸ್‌ನಲ್ಲಿ ವಕೀಲರಿಗೆ ಈಗ ಯಾವುದೇ ಕೆಲಸ ಉಳಿದಿಲ್ಲ, ಏಕೆಂದರೆ ಐಬಿಎಂ ವ್ಯಾಟ್ಸನ್ ಸಾಫ್ಟ್‌ವೇರ್ ಒಂದು ಕ್ಷಣದಲ್ಲಿ ಉತ್ತಮ ಕಾನೂನು ಸಲಹೆಯನ್ನು ನೀಡುತ್ತದೆ. ಮುಂದಿನ 10 ವರ್ಷಗಳಲ್ಲಿ, 90% ಯುಎಸ್ ವಕೀಲರು ನಿರುದ್ಯೋಗಿಗಳಾಗುತ್ತಾರೆ..10% ಉಳಿದಿರುವವರು...ಸೂಪರ್ ಸ್ಪೆಷಲಿಸ್ಟ್ ಆಗುತ್ತಾರೆ.

ವ್ಯಾಟ್ಸನ್ ಹೆಸರಿನ ಸಾಫ್ಟ್‌ವೇರ್ ಮಾನವರಿಗಿಂತ 4 ಪಟ್ಟು ಹೆಚ್ಚು ನಿಖರವಾಗಿ ಕ್ಯಾನ್ಸರ್ ರೋಗ ನಿರ್ಣಯವನ್ನು ಮಾಡುತ್ತದೆ. 2030ರ ವೇಳೆಗೆ ಕಂಪ್ಯೂಟರ್‌ಗಳು ಮನುಷ್ಯರಿಗಿಂತ ಹೆಚ್ಚು ಬುದ್ಧಿವಂತರಾಗಿರುತ್ತವೆ.

ಮುಂದಿನ 10 ವರ್ಷಗಳಲ್ಲಿ, 90% ಕಾರುಗಳು ಪ್ರಪಂಚದಾದ್ಯಂತ ರಸ್ತೆಗಳಿಂದ ಕಣ್ಮರೆಯಾಗುತ್ತವೆ...

ಉಳಿದಿರುವುವು ಎಲೆಕ್ಟ್ರಿಕ್ ಕಾರುಗಳು ಅಥವಾ ಹೈಬ್ರಿಡ್ ಆಗಿರುತ್ತವೆ... ರಸ್ತೆಗಳು ಖಾಲಿಯಾಗುತ್ತವೆ, ಪೆಟ್ರೋಲ್ ಬಳಕೆ 90% ರಷ್ಟು ಕಡಿಮೆಯಾಗುತ್ತದೆ, ಎಲ್ಲಾ ಅರಬ್ ರಾಷ್ಟ್ರಗಳು ದಿವಾಳಿಯಾಗುತ್ತವೆ.

ನೀವು ಉಬರ್‌ನಮತಹ ಸಾಫ್ಟ್‌ವೇರ್‌ನಿಂದ ಕಾರನ್ನು ಪಡೆಯುತ್ತೀರಿ ಮತ್ತು ಕೆಲವೇ ಕ್ಷಣಗಳಲ್ಲಿ ಚಾಲಕರಹಿತ ಕಾರು ನಿಮ್ಮ ಬಾಗಿಲಲ್ಲಿ ನಿಲ್ಲುತ್ತದೆ...

ನೀವು ಅದನ್ನು ಯಾರೊಂದಿಗಾದರೂ ಹಂಚಿಕೊಂಡರೆ, ಆ ಸವಾರಿ ನಿಮ್ಮ ಬೈಕ್‌ಗಿಂತ ಅಗ್ಗವಾಗಿರುತ್ತದೆ.

ಕಾರುಗಳು ಚಾಲಕರಹಿತವಾಗಿರುವುದರಿಂದ 99% ಅಪಘಾತಗಳು ನಿಂತು ಹೋಗುತ್ತವೆ.. ಇದು ಕಾರ್ ವಿಮೆ ಎಂಬ ವ್ಯವಹಾರವನ್ನು ನಿಲ್ಲಿಸುತ್ತದೆ.

ಚಾಲಕನಿಗೆ ಯಾವುದೇ ಉದ್ಯೋಗ ಇರುವುದಿಲ್ಲ. ನಗರಗಳು ಮತ್ತು ರಸ್ತೆಗಳಿಂದ 90% ಕಾರುಗಳು ಕಣ್ಮರೆಯಾದಾಗ, ಟ್ರಾಫಿಕ್ ಮತ್ತು ಪಾರ್ಕಿಂಗ್ ನಂತಹ ಸಮಸ್ಯೆಗಳು ಸ್ವಯಂ ಚಾಲಿತವಾಗಿ ಕಣ್ಮರೆಯಾಗುತ್ತವೆ... ಏಕೆಂದರೆ ಒಂದು ಕಾರು ಒಂದು 20 ಕಾರುಗಳಿಗೆ ಸಮಾನವಾಗಿರುತ್ತದೆ.

5 ಅಥವಾ 10 ವರ್ಷಗಳ ಹಿಂದೆ, ಪಿಸಿಒ ಇಲ್ಲದಂತ

ಸ್ಥಳ ಇರಲಿಲ್ಲ. ನಂತರ ಎಲ್ಲರ ಜೇಬಿನಲ್ಲಿ ಮೊಬೈಲ್ ಫೋನ್ ಬಂದಾಗ, ನಂತರ ಪಿಸಿಓ ಸ್ಥಗಿತಗೊಳ್ಳಲು ಪ್ರಾರಂಭಿಸಿತು. ನಂತರ ಆ ಎಲ್ಲಾ ಪಿಸಿಓ ಜನರು ಫೋನ್ ರೀಚಾರ್ಜ್ ಮಾಡಲು ಪ್ರಾರಂಭಿಸಿದರು. ಈಗ ಆನ್‌ಲೈನ್‌ನಲ್ಲಿ ರೀಚಾರ್ಜ್ ಕೋಡ ಪ್ರಾರಂಭಿಸಲಾಗಿದೆ.

ನೀವು ಎಂದಾದರೂ ಗಮನಿಸಿದ್ದೀರಾ...?

ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿನ ಪ್ರತಿ ಮೂರು ಅಂಗಡಿಗಳಲ್ಲಿ ಒಂದು ಅಂಗಡಿಯಲ್ಲಿ ಮೊಬೈಲ್ ಫೋನ್ ಮಾರಾಟ, ಸೇವೆ, ರೀಚಾರ್ಜ್, ಪರಿಕರಗಳು, ದುರಸ್ತಿ, ನಿರ್ವಹಣೆ ಮಾಡಲಾಗುತ್ತಿದೆ.

ಈಗ ಎಲ್ಲವನ್ನೂ ಪೇಟಿಎಂ ಮೂಲಕ ಮಾಡಲಾಗುತ್ತದೆ.. ಈಗ ಜನರು ತಮ್ಮ ಫೋನ್‌ಗಲಿಂದಲೂ ರೈಲ್ವೆ ಟಿಕೆಟ್‌ಗಳನ್ನು ಕಾಯ್ದಿರಿಸುತ್ತಿದ್ದಾರೆ. ಈಗ ಹಣದ ವಹಿವಾಟುಗಳು ಸಹ ಬದಲಾಗುತ್ತಿವೆ.. ಕರೆನ್ಸಿ ನೋಟ್ ಅನ್ನು ಮೊದಲು ಪ್ಲಾಸ್ಟಿಕ್ ಮನಿ ಮೂಲಕ ಬದಲಾಗುತ್ತಿತ್ತು. ಈಗ ಅದು ಡಿಜಿಟಲ್ ಆಗಿ ಮಾರ್ಪಟ್ಟಿದೆ.

ಜಗತ್ತು ಬಹಳ ವೇಗವಾಗಿ ಬದಲಾಗುತ್ತಿದೆ.. ಕಣ್ಣು ಮತ್ತು ಕಿವಿಗಳನ್ನು ತೆರೆದಿಡಿ, ನೀವು ಹಿಂದೆ ಉಳಿಯುತ್ತೀರಿ... ..ಆದ್ದರಿಂದ

ಒಬ್ಬ ವ್ಯಕ್ತಿಯು ಸಮಯಕ್ಕೆ ತಕ್ಕಂತೆ ತನ್ನ ವ್ಯವಹಾರ ಮತ್ತು ಸ್ವಭಾವವನ್ನು ಬದಲಾಯಿಸುತ್ತಲೇ ಇರಬೇಕು.

ಸಮಯದೊಂದಿಗೆ ಸಾಗಿ ಮತ್ತು ಯಶಸ್ಸನ್ನು ಸಾಧಿಸಿ.

ಇದು ಸುತ್ತಾಡಿತ್ತಿರುವ ಒಂದು ಒಳ್ಳೆಯ ಸಂದೇಶ.

ಮತ್ತೆ

ಉದ್ಯೋಗಕ್ಕೆ ಜನ ಏನು ಮಾಡುತ್ತಾರೆ?

ಅವರೆಲ್ಲರೂ ಭೂಮಿ ತಾಯಿಯ ಬಳಿ ಬರುತ್ತಾರೆ. ಏಕೆಂದರೆ ಎಲ್ಲರನ್ನೂ ಎಲ್ಲವನ್ನೂ ಸ್ವೀಕರಿಸಿವವಳು ಅವಳೊಬ್ಬಳೇ.

# ಗಡಿನಾಡಲಿ ಕನ್ನಡ



**ಹೋರಾಡಬೇಕು ನಾವೆಲ್ಲಾ
ಮಾತೃಭಾಷೆಯ ನಿಲುವಿಗಾಗಿ
ಸೇರಬೇಕು ಒಂದಾಗಿ ನಾವೆಲ್ಲಾ
ಕಾಸರಗೋಡಲ್ಲಿ ಕನ್ನಡದ ಉಳಿವಿಗಾಗಿ**

**ದಿಟ್ಟ ಹೆಜ್ಜೆಯ ಇಟ್ಟು
ದೃಢದಿ ಮುಂದಕೆ ಸಾಗುವತ್ತ
ಗಟ್ಟಿ ಇರಲಿ ಮನದಿ ಕೋರಿಕೆ
ಸರಿ ಗುರಿತೋರುವತ್ತ**

**ಬಳಗ ಕಟ್ಟಿ ಕನ್ನಡಿಗರ ಸೇರಿಸಿ
ನಮ್ಮ ಹಕ್ಕುಗಳಿಗಾಗಿ ಹೋರಾಡುವೆವು
ಎಲ್ಲರ ಒಗ್ಗೂಡಿಸಿ ಧ್ವನಿಯ ಏರಿಸಿ
ಕನ್ನಡ ಭಾಷೆಯ ಮೆರೆಸುವವು**

**ಬಳಗ ಕಟ್ಟಿ ಕನ್ನಡಿಗರ ಸೇರಿಸಿ
ನಮ್ಮ ಹಕ್ಕುಗಳಿಗಾಗಿ ಹೋರಾಡುವೆವು
ಎಲ್ಲರ ಒಗ್ಗೂಡಿಸಿ ಧ್ವನಿಯ ಏರಿಸಿ
ಕನ್ನಡ ಭಾಷೆಯ ಮೆರೆಸುವೆವು**

**ಅಳಿವು ಉಳಿವಿನ ಪ್ರಶ್ನೆ ಇದಾಗದೆ
ಒಂದಾಗಬೇಕೆಂಬುದು ನಿಶ್ಚಿತ
ಮರೆತು ಕೂಡಾ ಮರೆಯಲಾಗದು
ಹೋರಾಟಕ್ಕೆ ಇರಲಿ ಒಮ್ಮತ**



**–ಡಾ. ವಾಣಿಶ್ರೀ ಕಾಸರಗೋಡು.
ಗಡಿನಾಡ ಕನ್ನಡತಿ**

# ಸಂಭ್ರಮದ ಶ್ರಾವಣದಲ್ಲಿ ಸಾಂಸ್ಕೃತಿಕ ಉತ್ಸವ

ಪ್ರತೀ ಆಷಾಢ ಮಾಸ ಕಳೆದು ಇನ್ನೇನು ಕೆಲವೇ ದಿನಗಳಲ್ಲಿ ಶ್ರಾವಣ ಮಾಸ ಪ್ರಾರಂಭವಾಗುತ್ತದೆ. ಈಗಾಗಲೇ ಹಬ್ಬಗಳ ಆಚರಣೆಗಳು ಸಹ ಶುರುವಾಗಿದೆ.

ಭಾರತೀಯ ಸಮಾಜದಲ್ಲಿ ಹಬ್ಬಗಳೆಂಬ ಸಾಂಸ್ಕೃತಿಕ ಉತ್ಸವಗಳು, ಕಾರಣಗಳು ಏನೇ ಇರಲಿ ಹಬ್ಬಗಳು ಭಾರತದ ಜನಜೀವನದ ಅವಿಭಾಜ್ಯ ಅಂಗಗಳು. ಬಹುಶಃ ಕ್ಯಾಲೆಂಡರ್‌ನ ಎಲ್ಲಾ ದಿನಗಳಲ್ಲೂ ಹಬ್ಬಗಳ ಒಂದು ವೈಶಿಷ್ಟ್ಯ ಉಳಿಸಿಕೊಂಡಿರುವ ದೇಶ ಭಾರತವೇ ಇರಬೇಕು.

ಎಲ್ಲಾ ಹಬ್ಬಗಳಿಗೂ ಒಂದು ಹಿನ್ನೆಲೆ ಇದ್ದೇ ಇರುತ್ತದೆ. ಅದು ಪೌರಾಣಿಕ, ಧಾರ್ಮಿಕ, ಐತಿಹಾಸಿಕ, ಸಾಮಾಜಿಕ ಅಥವಾ ಪ್ರಾಕೃತಿಕ ಅನುಕೂಲಗಳಿಗೆ ತಕ್ಕಂತೆ ರೂಪಗೊಂಡಿದೆ.



ಶಿವರಾತ್ರಿಯಿಂದ ಮಾರಮ್ಮನ ಜಾತ್ರೆಯವರೆಗೆ, ಸಂಕ್ರಾತಿಯಿಂದ ದಸರಾವರೆಗೆ, ರಂಜಾನ್‌ನಿಂದ ಕ್ರಿಸ್ಮಸ್‌ವರೆಗೆ ಚಿತ್ರ ವಿಚಿತ್ರ ವೈವಿಧ್ಯಮಯ ಹಬ್ಬಗಳನ್ನು ಆಚರಿಸಲಾಗುತ್ತದೆ. ಪ್ರಾರಂಭದಲ್ಲಿ ಹಬ್ಬಗಳು ಭಕ್ತಿ ಮತ್ತು ನಂಬಿಕೆಯ ಮಹತ್ವ ಪಡೆದಿದ್ದರೆ, ನಂತರದಲ್ಲಿ ಕೌಟುಂಬಿಕ ಸಂಬಂಧಗಳನ್ನು ಬೆಸೆಯುವ ಆಚರಣೆಗಳಾದವು. ಊರಿನ ಜನರ ಐಕ್ಯತೆ ಸಾರುವ ಉತ್ಸವಗಳೂ ಆದವು. ತದನಂತರ ಮನೆಗೆ ಸುಣ್ಣ ಬಣ್ಣ ಹೊಸ ಬಟ್ಟೆಗಳ ಸಂಭ್ರಮವೂ ಮುಖ್ಯವಾದವು. ಆಧುನಿಕತೆ ಬೆಳೆದಂತೆ ಮತ್ತಷ್ಟೂ ಬದಲಾವಣೆ ಗಳಾದವು.

ಕಾಲಕಾಲಕ್ಕೆ ಹಬ್ಬದ ಆಚರಣೆಗಳು ಬದಲಾಗುತ್ತಾ ಬಂದರು ಹಬ್ಬದ ಊಟ ಮಾತ್ರ ಈಗಲೂ ತನ್ನ ಮಹತ್ವವನ್ನು ಹಾಗೆಯೇ ಉಳಿಸಿಕೊಂಡಿದೆ. ಒಂದೊಂದು ಹಬ್ಬಕ್ಕೆ ಒಂದೊಂದು ಬಗೆಯ ವಿಭಿನ್ನ ಡುಗೆಗಳು, ವಿವಿಧ ಪ್ರದೇಶಗಳಲ್ಲಿ ಇದರಲ್ಲೂ ಭಿನ್ನತೆ ಇದೆ. ವಯಸ್ಸಾದಂತೆ ಬಾಯಿ ರುಚಿ ಕಡಿಮೆಯಾದರೂ ಹೊಟ್ಟೆ ಮಾತ್ರ ಸ್ವಾದಿಷ್ಟ ಆಹಾರ ಬಯಸುವುದನ್ನು ನಿಲ್ಲಿಸುವುದಿಲ್ಲ ಹಬ್ಬಗಳು ನಮ್ಮ ಮನೋಲ್ಲಾಸವನ್ನು ಹೆಚ್ಚಿಸುತ್ತವೆ. ಅದರಲ್ಲೂ ಚಿಕ್ಕ ಮಕ್ಕಳು ಹಬ್ಬಗಳನ್ನು ಸಂಭ್ರಮಿಸುತ್ತಾರೆ ಮತ್ತು ತಮ್ಮ ಬದುಕಿನ ಉದ್ದಕ್ಕೂ ಅದನ್ನು ನೆನಪಾಗಿ ಮೆಲುಕು ಹಾಕುತ್ತಿರುತ್ತಾರೆ. ಹಬ್ಬಗಳ ಬಗ್ಗೆ ಆರೋಪಗಳು ಇಲ್ಲದಿಲ್ಲ. ಹಬ್ಬಗಳು ತಮ್ಮ ಮೂಲ ಆಶಯದಿಂದ ಹಿಂದೆ ಸರಿದು ಕೇವಲ ಕೃತಕ ಆಚರಣೆಗಳಾಗಿ ಮಾರ್ಪಟ್ಟಿವೆ. ತೋರಿಕೆಯ ಪ್ರದರ್ಶನವೇ ಹೆಚ್ಚು. ಹಬ್ಬಗಳು ಮೌಢ್ಯವನ್ನು ಬಿತ್ತುತ್ತವೆ. ಮತ್ತು ಅದೇ ಶೋಷಣೆಯ ಮಾರ್ಗಗಳಾಗಿವೆ.

ಹಬ್ಬಗಳು ಬಡವರ ನೋವನ್ನು ಮತ್ತೆ ಹೆಚ್ಚಿಸುತ್ತದೆ. ಸಮಾಜದಲ್ಲಿ ಅಸಮಾನತೆ ಸೃಷ್ಟಿಸಲು ಹಬ್ಬಗಳ ಮೌಢ್ಯವನ್ನು ಬಿತ್ತುತ್ತವೆ. ಮತ್ತು ಅದೇ ಶೋಷಣೆಯ ಮಾರ್ಗಗಳಾಗಿವೆ. ಹಬ್ಬಗಳು ಬಡವರ ನೋವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಸಮಾಜದಲ್ಲಿ ಅಸಮಾನತೆ ಸೃಷ್ಟಿಸಲು ಹಬ್ಬಗಳ ಆಚರಣೆ ಮಾಡಲಾಗುತ್ತದೆ.

ಇತ್ತೀಚೆಗೆ ಟಿವಿ ಸುದ್ದಿ ಮಾಧ್ಯಮಗಳು ಈ ಹಬ್ಬಗಳನ್ನು ವಾಣಿಜ್ಯೀಕರಣ ಮಾಡಿ ಹಬ್ಬಗಳ ವೈಚಾರಿಕ ಮಹತ್ವ ಕಡಿಮೆ ಮಾಡಿ ಕೇವಲ ಆಚರಣೆಗಳ ಬಗ್ಗೆ ಮಾತ್ರ ಪ್ರಚಾರ ಮಾಡಿ ಅದರ ಮೌಲ್ಯಗಳನ್ನು ನಾಶ ಮಾಡುತ್ತಿವೆ ಎಂಬ ಆರೋಪಗಳು ಸಾಮಾನ್ಯ ಜನರಲ್ಲಿ ಹರಿದಾಡುತ್ತಿದೆ.

ಏನೇ ಆಗಲಿ ಶ್ರಾವಣ ಮಾಸದಲ್ಲಿ ಹಬ್ಬಗಳು ಸರತಿ ಸಾಲಿನಲ್ಲಿ ಬರಲಿವೆ. ಕೊರೋನಾ ಮಾರಿ ನಮ್ಮೆಲ್ಲರನ್ನು ನಿರಾಸೆ ಆತಂಕಗಳಿಗೆ ದೂಡಿ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಅದರ ಚೇತರಿಕೆಯ ಅಗತ್ಯತೆಯೂ ಇದೆ.

ಸಾವುಗಳು ಸಹಜವಾಗುತ್ತಾ
ಸಂವೇದನೆಗಳು ಸರ್ವನಾಶವಾಗುತ್ತಾ,
ಭಾವನೆಗಳು ಬರಿದಾಗುತ್ತಾ,
ಮಾತುಗಳು ಕೃತಕವಾಗುತ್ತಾ ಅಕ್ಷರಗಳು
ಅಸಹನೀಯವಾಗುತ್ತಾ,
ಮನಸುಗಳು ಮಲೀನವಾಗುತ್ತಾ
ಸಂಬಂಧಗಳು ಶಿಥಿಲವಾಗುತ್ತಾ,
ಮೌಲ್ಯಗಳು ಮಸುಕಾಗುತ್ತಾ,
ಆಡಳಿತ ಅರಾಜಕತೆಯಾಗುತ್ತಾ,
ಬದುಕು ಬರಡಾಗುತ್ತಾ,
ಸಮಾಜ ಅಸ್ತವ್ಯಸ್ತವಾಗುತ್ತಾ,
ಪರಿಸರ ಕಲ್ಮಶವಾಗುತ್ತಾ,
ವಿದ್ಯೆ ವ್ಯಾಪಾರವಾಗುತ್ತಾ,
ವಿವೇಚನೆ ವಿಕಾರವಾಗುತ್ತಾ,
ಆರೋಗ್ಯ ಅನಾರೋಗ್ಯವಾಗುತ್ತಾ,
ಗಂಡನ್ನು ಅನುಮಾನಿಸುತ್ತಾ,
ಹೆಣ್ಣನ್ನು ಅವಮಾನಿಸುತ್ತಾ,
ಹಣವನ್ನು ಪೂಜಿಸುತ್ತಾ,
ಅಧಿಕಾರವನ್ನು ಆರಾಧಿಸುತ್ತಾ,
ಭ್ರಮೆಗಳನ್ನು ಸೃಷ್ಟಿಸುತ್ತಾ,
ಅಮಾಯಕರನ್ನು ಶೋಷಿಸುತ್ತಾ,
ಅಸಹಾಯಕರನ್ನು ವಂಚಿಸುತ್ತಾ,
ಭ್ರಷ್ಟರನ್ನು ಚುನಾಯಿಸುತ್ತಾ,
ವಿಧಿಯನ್ನು ಅಳಿಯುತ್ತಾ,
ಕಾಣದ ಶಕ್ತಿಯನ್ನು ನಂಬುತ್ತಾ,
ಆತ್ಮ ಶಕ್ತಿಯನ್ನು ನಿರ್ಲಕ್ಷಿಸುತ್ತಾ,
ಆತ್ಮವಂಚನೆಗೆ ಬಲಿಯಾಗುತ್ತಾ,
ಆಡಂಬರಕ್ಕೆ ಆಕರ್ಷಿತವಾಗುತ್ತಾ,
ಪ್ರೀತಿಗೆ ಹಂಬಲಿಸುತ್ತಾ,
ದ್ವೇಷಕ್ಕೆ ಬಲಿಯಾಗುತ್ತಾ,
ಒಳ್ಳೆಯದನ್ನು ಹುಡುಕುತ್ತಾ,
ಕೆಟ್ಟದ್ದನ್ನು ಅನುಸರಿಸುತ್ತಾ,
ಮುನ್ನಡೆಯುತ್ತಿರುವುದೇ.......

ಆಧುನಿಕ ನಾಗರೀಕ ಸಮಾಜ.
ನಾವು – ನೀವು – ಅವರು – ಇವರು,
ಎಲ್ಲರೂ ಪಾತ್ರಧಾರಿಗಳು,
ನಿಜ ಸೂತ್ರಧಾರಿಯನ್ನು ಹುಡುಕುತ್ತಾ.....

ಬದಲಾವಣೆ ಬಯಸುತ್ತಾ........
ನಂಬಿಕೆಗಳು ವಾಸ್ತವವಗಲಿ,
ವೈಚರಿಕವಾಗಲಿ ಎಂದು ಇಚ್ಛಿಸುತ್ತಾ.....

ಈ ದಿನಗಳಲ್ಲಿ ಹಬ್ಬಗಳು ನಮ್ಮಲ್ಲಿ ಹೊಸ
ಚೈತನ್ಯ ಮೂಡಿಸಿ, ಬದುಕಿನ ಬರವಸೆಗೆ
ಮುನ್ನುಡಿಯಾಗಲಿ. ಉತ್ತಮ ಮುಂಗಾರಿನ
ಕಾರಣದಿಂದ ಜನರ ಜೀವನದಲ್ಲಿ ಹೊಸ
ಆಸೆ ಚಿಗುರಲಿ, ಎಲ್ಲರ ದೇಹದಲ್ಲಿ ರೋಧ
ನಿರೋಧಕ ಶಕ್ತಿ ಹೆಚ್ಚಾಗಲಿ ಎಂದು ಆಶಿಸುತ್ತಾ ಹಾರೈಸುತ್ತಾ.....

–ಸಂಗ್ರಹ



## ನುಡಿಮುತ್ತುಗಳು

♦ ಯಾವುದಕ್ಕೂ ಅಂಜದಿರು; ಅದ್ಭುತ ಕಾರ್ಯವನ್ನು ಮಾಡಲು ಶಕ್ತನಾಗುವೆ. ಭೀತಿಯೇ ಪ್ರಪಂಚದ ಎಲ್ಲ ದುಃಖಗಳಿಗೂ ಮಹತ್ಕಾರಣ. ನಮ್ಮ ದುರವಸ್ಥೆಗಳಿಗೆಲ್ಲಾ ಭೀತಿಯೇ ಕಾರಣ. ನಿರ್ಭೀತಿ ಕ್ಷಣಮಾತ್ರದಲ್ಲಿ ಸ್ವರ್ಗವನ್ನೇ ಕೊಡಬಲ್ಲದು. ಎದ್ದು ನಿಲ್ಲು, ಜಾಗೃತನಾಗು ಮತ್ತು ಗುರಿ ತಲುಪುವವರೆಗೂ ನಿಲ್ಲದಿರು.

♦ ನಿಮ್ಮೊಬ್ಬರ ಮೇಲೇ ಸಮಸ್ತ ಕೆಲಸವೂ ಬಿದ್ದಿದೆಯೇನೋ ಎಂಬಂತೆ ನೀವು ಪ್ರತಿಯೊಬ್ಬರೂ ಕೆಲಸ ಮಾಡಿ. ಐವತ್ತಕ್ಕೂ ಹೆಚ್ಚು ಶತಮಾನಗಳು ನಿಮ್ಮನ್ನು ನೋಡುತ್ತ ನಿಂತಿವೆ. ಭಾರತದ ಭವಿಷ್ಯ ನಿಮ್ಮನ್ನು ಅವಲಂಬಿಸಿದೆ. ಕೆಲಸಮಾಡಿಕೊಂಡು ಹೋಗಿ.

♦ ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲ. ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು–ಇದೇ ಧರ್ಮದ ಸರ್ವಸ್ವ.

♦ ಮಾನವನಲ್ಲಿ ಈಗಾಗಲೇ ಅಡಗಿರುವ ದೈವತ್ವವನ್ನು ಪ್ರಕಾಶಪಡಿಸುವುದೇ ಧರ್ಮ.

# ಸಾಧಿಸುವ ಛಲವಿದ್ದರೆ ಯಶಸ್ಸು ಕಟ್ಟಿಟ್ಟ ಬುತ್ತಿ

ಮಹರ್ಷಿ ಪಾಣಿನಿ ಬಾಲ್ಯದಲ್ಲಿ ತುಂಬಾ ದಡ್ಡರಾಗಿದ್ದರು. ವಿಧ್ಯಾಭ್ಯಾಸಕ್ಕಾಗಿ ತಂದೆ ಪಾಣಿನಿಯವರನ್ನು ಗುರುಕುಲಕ್ಕೆ ಸೇರಿಸಿದರು. ಒಂದು ದಿನ ಗುರುಗಳು ಪಾಣಿನಿ ಪಾಠ



ಒಪ್ಪಿಸಲಿಲ್ಲ ಎಂದು ಬೆತ್ತದಿಂದ ಕೈಗೆ ಹೊಡೆಯಲು ಹೋಗಿ ಹೊಡೆಯದೆ ಸುಮ್ಮನಾದರು. ಪಾಣಿನಿ ಏಕೆ ಹೊಡೆಯಲಿಲ್ಲ ಗುರುಗಳೇ ಎಂದಾಗ, ಗುರುಗಳು ನಿನ್ನ ಕೈಯಲ್ಲಿ ವಿದ್ಯಾ ರೇಖೆಯೆ ಇಲ್ಲ ನೀನು ತಾನೇ ಏನು ಮಾಡಲು ಸಾಧ್ಯ, ನೀನು ವಿದ್ಯೆ ಕಲಿಯುವುದು ಸಾಧ್ಯವಿಲ್ಲ. ನೀನು ಮನೆಗೆ ಹೋಗು ಎಂದರು. ಆಗ ಪಾಣಿನಿ ಇದನ್ನು ಕೇಳಿ ವಿದ್ಯೆ ಕಲಿಯಬೇಕೆಂಬ ಆಸೆ ನಿರಾಸೆ ಆಯಿತಲ್ಲ ಎಂದು ಬೇಸರ ಪಟ್ಟು ಮನೆಗೆ ಹಿಂದಿರುಗುತ್ತಿರುವಾಗ ದಾರಿಯಲ್ಲಿ ಹೆಂಗಸರು ಬಾವಿಯಲ್ಲಿ ನೀರಿ ಸೇದುತ್ತಿರುವುದನ್ನು ಕಂಡು ಹೆಂಗಸರಿಗೆ ಈ ಬಾವಿ ಮೊದಲಿನಿಂದಲೂ ಹೀಗೆಯೇ ಎಂದು ಕೇಳಿದನು. ಆಗ ಹೆಂಗಸರು ಇಲ್ಲ, ಒಂದು ಕಲ್ಲನ್ನು ಕೊರೆದು ಕೊರೆದು ಈ ಬಾವಿಯ ಆಕಾರ ಮಾಡಿದರು ಎಂದರು. ತಕ್ಷಣ ಪಾಣಿನಿ ಹೌದೇ ಎಂದು ತನ್ನ ಮನಸ್ಸಿನಲ್ಲಿ ಒಂದು ಉಪಾಯ ಹೊಳೆಯಿತು. ಆಗ ಒಂದು ಚೂಪಾದ ಚಾಕುವನ್ನು ತೆಗೆದುಕೊಂಡು ತನ್ನ ಕೈಯಲ್ಲಿ ವಿದ್ಯಾರೇಖೆಯನ್ನು ಗೀಚಿ, ಗುರುಗಳ ಬಳಿ ಬಂದ. ಆಗ ಗುರುಗಳು ನಾನು ನಿನ್ನನ್ನು ಮನೆಗೆ ಹೋಗು ಎಂದಿದ್ದೇ ಅಲ್ಲವೇ ಮತ್ತೇಕೆ ಬಂದಿರುವೇ ಎನ್ನುತ್ತಾ ಪಾಣಿನಿ ಕೈಯಿಂದ ರಕ್ತ ಬರುವುದನ್ನು ಕಂಡು, ಇದೇನು ಮಾಡಿಕೊಂಡಿರುವೆ ಎಂದನು. ಆಗ ಪಾಣಿನಿ ನೀವು ನನ್ನ ಕೈಯಲ್ಲಿ ವಿದ್ಯಾರೇಖೆ ಇಲ್ಲ ಎಂದಿದ್ದಿರಿ ಅಲ್ಲ ಗುರುಗಳೇ ಅದಕ್ಕೆ ವಿದ್ಯಾ ರೇಖೆಯನ್ನು ನಾನೇ ಚಾಕುವಿನಿಂದ ಎಳೆದುಕೊಂಡಿರುವೆ ಅಂದನು.ಆಗ ಗುರುಗಳು ಪಾಣಿನಿಗೆ ವಿದ್ಯೆ ಮೆಲೆ ಇರುವ ಆಸಕ್ತಿ, ಶ್ರದ್ಧೆಯನ್ನು ಕಂಡು ವಿದ್ಯೆಯನ್ನು ಕಲಿತು ಪಾಣಿನಿ ಸಂಸ್ಕೃತದ ವ್ಯಾಕರಣ ಶಾಸ್ತ್ರವನ್ನು ಬರೆದು ದೊಡ್ಡ ಮಹರ್ಷಿ ಆದ. ಪಾಣಿನಿ ತನ್ನ ಕೈಯಲ್ಲಿ ವಿದ್ಯಾ ರೇಖೆಯಿಲ್ಲ ಎಂದು ಸುಮ್ಮನೆ ಕುಳುತ್ತಿದ್ದರೆ ವ್ಯಾಕರಣ ಗ್ರಂಥವನ್ನು ಬರೆಯುತ್ತಿರಲಿಲ್ಲ.

(ಸಾರಾಂಶ: ನನ್ನ ಹಸ್ತರೇಖೆ, ಜಾತಕ, ಹಣೆಬರಹ ಸರಿಯಿಲ್ಲ ಅಂತ ನಮ್ಮನ್ನು ನಾವೇ ಕೀಳಾಗಿ ಕಂಡರೆ ನಾವು ಎಂದಿಗೂ ಮುಂದೆ ಬರುವುದಿಲ್ಲ, ಸಾಧನೆ ಮಾಡುವುದಿಲ್ಲ. ನಮ್ಮಲ್ಲಿ ಏನನ್ನಾದರೂ ಮಾಡುವ ಶ್ರದ್ಧೆ, ಆಸಕ್ತಿ, ಪ್ರಯತ್ನ, ಛಲ, ಧೃಢ ಸಂಕಲ್ಪ ಇದ್ದರೆ ಏನನ್ನಾದರೂ ಸಾಧನೆ ಮಾಡಬಹುದು.)



**ಶರತ್ ಕುಮಾರ್ ಬಿ ಎಸ್**

**ಶಿಕ್ಷಕರು**, ಅಭಿನವ ಭಾರತಿ ಪ್ರೌಢಶಾಲೆ (ಕನ್ನಡ ಮಾಧ್ಯಮ)

## ರಾಮಕೃಷ್ಣ ಪರಮಹಂಸರ ನುಡಿ

**1) ದುಃಖ ಬಂದಾಗ ನಗುತ್ತಿರುವುದರಿಂದ ದುಃಖದಲ್ಲೂ ಸುಖ ಸಿಗುತ್ತದೆ.**


**2) ಸ್ವರ್ಗವೆಂದರೆ ಮತ್ತೇನು ಅಲ್ಲ ಯಾವಾಗಲೂ ಸಂತೋಷವಾಗಿ ಇರುವವರ ಮನಸ್ಸು.**

**3) ಬಂಧಿತನಾದ ದೇವರೇ ಮನುಷ್ಯ; ಬಂಧನದಿಂದ ಬಿಡಿಸಿಕೊಂಡ ಮನುಷ್ಯನೇ ದೇವರು.**

**4) ಕತ್ತಲೆ ಇಲ್ಲದೆ ಹೋದರೆ ಬೆಳಕಿನ ಮಹತ್ವ ಅರಿವಾಗುವುದಿಲ್ಲ. ದುಃಖ ಇಲ್ಲದಿದ್ದರೆ ಸುಖವೆಂದರೆ ಏನೆಂದು ಗೊತ್ತಾಗುವುದಿಲ್ಲ.**

**ಸಿಪ್ಪೆ ಇರುವುದರಿಂದ ತಾನೆ ಮಾವಿನಕಾಯಿ ಚೆನ್ನಾಗಿ ಬೆಳೆಯುವುದು, ಹಣ್ಣಾಗುವುದು? ಮಾವಿನ ಕಾಯಿ ಸಂಪೂರ್ಣ ಹಣ್ಣಾಗಿ ತಿನ್ನಲು ಸಿದ್ಧವಾದ ಮೇಲೆ ಸಿಪ್ಪೆಯನ್ನು ಬಿಸಾಡುತ್ತೇವೆ ಅಲ್ಲವೆ? ಮಾಯೆಯೂ ಈ ಸಿಪ್ಪೆಯ ಹಾಗೆಯೇ.**

**4) ವಜ್ರವು ಹೊಳಪು ಪಡೆಯಬೇಕಾದರೆ, ಅದನ್ನು ಕತ್ತರಿಸಲೇಬೇಕಾಗುತ್ತದೆ. ಬೆಂಕಿಯಲ್ಲಿ ಪುಟಕ್ಕಿಡದೆ ಚಿನ್ನ ಶುದ್ಧವಾಗದು. ಸಜ್ಜನರು ಹಾಗೇ, ವಿವಿಧ ಪರೀಕ್ಷೆಗಳಿಗೆ ಒಳಗಾಗುತ್ತಾರೆ. ಅದನ್ನು ಕಷ್ಟಗಳೆಂದು ಕರೆಯಬೇಕಿಲ್ಲ. ಈ ಅನುಭವಗಳ ಮೂಲಕ ಅವರು ಪಾಠ ಕಲಿಯುತ್ತಾರೆಯೇ ಹೊರತು ಯಾತನೆ ಪಡುವುದಿಲ್ಲ.**



# ನಾವುಗಳು ಋಣವಂತರು

ನಾವು ಒಪ್ಪಿಕೊಳ್ಳಬಹುದು ಅಥವಾ ಒಪ್ಪಿಕೊಳ್ಳದಿರಬಹುದು. ಆದರೆ ನಾವೆಲ್ಲಾ ಸಾಲಗಾರರೇ! ಸಾಲ ಎಂದರೆ ಹಣದ ಸಾಲವೇ ಇರಬೇಕೆಂದಿಲ್ಲ ಅಲ್ಲವೇ? ನಾವು ಯಾರಿಂದಲಾದರೂ, ಏನಾದರೂ ಸಹಾಯ ಪಡೆದಿದ್ದರೆ, ಅದೂ ಒಂದು ಬಗೆಯ ಸಾಲವೇ ಅಲ್ಲವೇ? ಅಂಥ ಸಾಲವನ್ನೂ ತೀರಿಸಬೇಕಲ್ಲವೇ? ಆಗಿಂದಾಗಲೇ ಅಲ್ಲದಿದ್ದರೂ ಒಂದಲ್ಲಾ ಒಂದು ದಿನ ಆ ಸಾಲವನ್ನು ತೀರಿಸಬೇಕು! ಹೀಗೆ ಎಂದೋ ಪಡೆದಿದ್ದ ಸಹಾಯದ ಸಾಲವನ್ನು ಮುಂದೆಂದೋ ಒಂದು ದಿನ ತೀರಿಸಿ ಋಣಮುಕ್ತರಾದವರ ಕುತೂಹಲಕಾರಿ ಪ್ರಸಂಗವೊಂದು ಇಲ್ಲಿದೆ.

ಒಮ್ಮೆ ವಿದೇಶವೊಂದರಲ್ಲಿ ರಕ್ತಕ್ರಾಂತಿಯಾಯಿತಂತೆ. ಸವಿರಾರು ಜನ ಪ್ರಾಣ ಕಳೆದುಕೊಂಡರು. ಹತ್ತಾರು ಸಾವಿರ ಜನ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ನಿರಾಶ್ರಿತರಾದರು. ಪ್ರಾಣ ಉಳಿದರೆ ಸಾಕೆಂದುಕೊಂಡವರು ಸ್ವದೇಶ ತೊರೆದು ಪರದೇಶಗಳಿಗೆ ಹೋಗಿ ಬದುಕುವ ದಾರಿಗಳನ್ನು ಹುಡುಕತೊಡಗಿದರು. ಅಂಥ ನಿರಾಶ್ರಿತರಲ್ಲಿ ಒಬ್ಬರು ಪರದೇಶದಲ್ಲಿ ಹೋಟೆಲೊಂದರ ಮ್ಯಾನೇಜರ್‌ನ್ನು ಭೇಟಿಯಾಗಿ ತಮ್ಮ ದುಸ್ಥಿತಿ ವಿವರಿಸಿ 'ಕಸ ಗುಡಿಸುವುದೋ, ಪಾತ್ರ ತೊಳೆಯುವುದೋ, ಯಾವ ಕೆಲಸವಾದರೂ ಚಿಂತೆಯಿಲ್ಲ. ಕೆಲಸ ಕೊಡಿ! ಉಪವಾಸವಿರುವ ಮಡದಿ ಮಕ್ಕಳಿಗೆ ಎರಡು ತುತ್ತು ಊಟ ಸಿಕ್ಕರೆ ಸಾಕು ಎಂದು ಕೇಳಿಕೊಂಡರು. ಮ್ಯಾನೇಜರು ಆತನನ್ನು ದಿಟ್ಟಿಸಿ ನೋಡಿ 'ನಿಮ್ಮನ್ನು ಎಲ್ಲೋ ನೋಡಿದಂತಿದೆ. ನೀವು ನಿಮ್ಮ ದೇಶದಲ್ಲಿದ್ದಾಗ ಸುಂಕ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೀರಾ? ಎಂದು ಕೇಳಿದರು. ನಿರಾಶ್ರಿತರು ಹೌದೆಂದು ತಲೆಯಾಡಿಸಿದರು.

ಮ್ಯಾನೇಜರರು ' ನಿಮಗೆ ನೆನಪಿರಲಿಕ್ಕಿಲ್ಲ! ಸುಮಾರು ಹತ್ತು ವರ್ಷಗಳ ಹಿಂದೆ ಕಾರ್ಯನಿಮ್ಮಿತ್ತ ಒಬ್ಬ ಯುವಕ ನಿಮ್ಮ ದೇಶಕ್ಕೆ ಬಂದಿದ್ದ. ಆತನನ್ನು ವಿಮಾನ ನಿಲ್ದಾಣದಲ್ಲಿ ಸುಂಕ ತಪಾಸಣಾ ಅಧಿಕಾರಿಗಳು ತಡೆದು ನಿಲ್ಲಿಸಿದರು. ಯಾವ್ಯಾವುದೋ ಕಾನೂನನ್ನು ಉಲ್ಲೇಖಿಸಿದರು. ಏನೇನೊ ಪ್ರಶ್ನೆಗಳನ್ನು ಕೇಳಿದರು. ಅವೆಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಲು ಯುವಕನಿಂದಾಗಲಿಲ್ಲ. ಅಧಿಕಾರಿಗಳು ಪ್ರಶ್ನೆಗಳಿಗೆ ಉತ್ತರಿಸದಿದ್ದರೆ ನೀವು ನಮ್ಮ ದೇಶವನ್ನು ಬಿಟ್ಟು ಹೋಗುವಂತಿಲ್ಲ. ನಿಮ್ಮನ್ನು ಬಂಧಿಸಲಾಗುವುದು ಎಂದು ಬೆದರಿಸಿದರು. ಆಗ ಅಲ್ಲಿಗೆ ಹಿರಿಯ ಅಧಿಕಾರಿಯೊಬ್ಬರು ಬಂದರು. ತಮ್ಮ ಇಲಾಖೆಯವರನ್ನು ಮಾತನಾಡಿಸಿದರು. ಯುವಕನನ್ನಾ ಮಾತನಾಡಿಸಿದರು. ಯುವಕ ನಿರಪರಾಧಿಯೆಂದೂ ಯುವಕನನ್ನು ಅಲ್ಲಿಂದ ಬಿಡುಗಡೆ ಮಾಡಿದರು.

ಹಾಗೆ ಸಹಾಯ ಮಾಡಿದ ಅಧಿಕಾರಿ ನೀವೆ ಅಲ್ಲವೇ ?' ಎಂದಾಗ ನಿರಾಶ್ರಿತರು 'ಬಹಳ ಹಿಂದಿನ ಮಾತು.ನನಗೀಗ ಎಲ್ಲವೂ ನೆನಪಾಗುತ್ತಿದೆ. ಆ ಅಧಿಕಾರಿ ನಾನೇ ಎಂದರು. ಮ್ಯಾನೇಜರ್ ಸಂತಸದಿಂದ ನೀವು ಯುವಕನಿಗೆ ಸಹಾಯ ಮಾಡಿದಷ್ಟೇ ಅಲ್ಲ, ಆತ ನಿಮಗೊಂದಷ್ಟು ಹಣ ಕಾಣಿಕೆಯಾಗಿ ಕೊಡಲು ಬಂದಾಗ ನೀವದನ್ನು ತೆಗೆದುಕೊಳ್ಳಲಿಲ್ಲ. 'ನನಗೆ ಹಣ ಬೇಡ ನೀವು ನನ್ನನ್ನು ನಿಮ್ಮ ಸ್ನೇಹಿತನೆಂದು ಭಾವಿಸಿಕೊಳ್ಳಿ. ನನಗಷ್ಟೇ ಸಾಕು'ಎಂದಿದ್ದೀರಿ. ನೆನಪಿದೆಯೇ? ಎಂದಾಗ, ಆ ನಿರಾಶ್ರಿತರು ಕೊಂಚ ಗಲಿಬಿಲಿಗೊಂಡರು. ಅದೆಲ್ಲಾ ನಿಜ. ಆದರೇ

ಇಷ್ಟೆಲ್ಲಾ ವಿವರಗಳನ್ನು ಅರಿತಿರುವ ನೀವು ಯಾರೆಂದು ಗೊತ್ತಾಗಲಿಲ್ಲ' ಎಂದರು. ಮ್ಯಾನೇಜರ್ ನೀವಂದು ಸಹಾಯ ಮಾಡಿದ ಯುವಕ ನಾನೇ!

ನಾವಿಬ್ಬರೂ ಮುಂದೆ ಎಂದಾದರೂ, ಎಲ್ಲಾದರೂ ಭೇಟಿಯಾಗುತ್ತೇವೆಂಬ ಕಲ್ಪನೆ ನಿಮಗೂ ಇರಲಿಲ್ಲ. ನನಗೂ ಇರಲಿಲ್ಲ. ಆದರೂ ನೀವು ಮಾಡಿದಿರಿ. ನನಗೊಬ್ಬ ಸ್ನೇಹಿತ ಸಿಕ್ಕರೆ ಸಾಕೆಂದಿರಿ. ಈಗ ನಿಮ್ಮ ಸ್ನೇಹಿತನಾಗಿ ನಾನು ಇಲ್ಲಿದ್ದೇನೆ. ನೀವಂದು ಮಾಡಿದ ಸಹಾಯವನ್ನು ಇಂದು ತೀರಿಸಲು ನನಗೆ ಸಾಧ್ಯವಾದರೆ, ನಾನು ಋಣಮುಕ್ತನಾದೆನೆಂದು ಭಾವಿಸುತ್ತೇನೆ'ಎಂದು ಹೇಳಿ ಆ ನಿರಾಶ್ರಿತರ ವಿದ್ಯಾರ್ಹತೆ, ಅನುಭವಗಳಿಗೆ ಸರಿಹೊಂದುವ ಕೆಲಸವನ್ನೇ ಕೊಟ್ಟರಂತೆ. ಆ ಯುವಕ ಎಂದೋ ಮಾಡಿದ್ದ ಸಹಾಯದ ಸಾಲವನ್ನು ಮತ್ತೆಂದೋ ತೀರಿಸಿ ಋಣಮುಕ್ತರಾದ ಪ್ರಸಂಗವನ್ನು ಓದುವಾಗ ನಮಗೆ ನಾವು ಎಂದೋ ಯಾರಿಂದಲೋ ಪಡೆದಿರಬಹುದಾದ ಸಹಾಯದ ಸಹಕಾರದ ಸಾಲ ನೆನಪಾಗುತ್ತದೆಯೇ? ನಾವು ಅದನ್ನು ತೀರಿಸುವುದು ಎಂದು? ಋಣ ಮುಕ್ತರಾಗುವುದು ಎಂದು? ಅಂಥ ಋಣ ನಮ್ಮ ಮೇಲ್ಲಿಲ್ಲ ಎನ್ನುವವರು ಯಾರಾದರೂ ಇದ್ದರೆ ಅಂಥವರಿಗೆ ಪ್ರಣಾಮಗಳು.

**ಕೃಪೆ: ಶ್ರೀ ಈಶ್ವರಾನಂದ ಸ್ವಾಮೀಜಿ**

# ಪಂಚ ಪಾಂಡವ ಸ್ತೋತ್ರಂ



**ಧರ್ಮೋ ವಿವರ್ಧತಿ ಯುದಿಷ್ಟಿರ ಕೀರ್ತನೇನ**
**ಪಾಪಂ ಪ್ರಣಶ್ಯತಿ ವೃಕೋದರಕೀರ್ತನೇನ ।**
**ಶತ್ರುರ್ವಿಶ್ಯತಿ ಧನಂಜಯ ಕೀರ್ತನೇನ**
**ಮಾದ್ರೀಸುತೌ ಕಥಯತಾಂ ನ ಭವಂತಿ ರೋಗಾಃ ॥**

ಬೆಳಗ್ಗೆ ಎದ್ದ ಕೂಡಲೇ ಈ ಶ್ಲೋಕವನ್ನು ಹೇಳಬೇಕು. ಇದರಲ್ಲಿ ಪುಣ್ಯಾತ್ಮರಾದ ಪಂಚ ಪಾಂಡವರನ್ನು ಸ್ಮರಿಸಲಾಗುತ್ತದೆ.

**ಯುಧಿಷ್ಟಿರಕೀರ್ತನೇನ ಧರ್ಮೋ ವಿವರ್ಧತಿ :** ಯುಧಿಷ್ಟಿರನನ್ನು ಕೀರ್ತನ ಮಾಡುವುದರಿಂದ ಧರ್ಮವು ವರ್ಧಿಸುತ್ತದೆ. ಧರ್ಮರಾಜನನ್ನು ಸ್ಮರಿಸುವುದರಿಂದ ನಮಗೂ ಧರ್ಮಾಭಿವೃದ್ಧಿಯಾಗಲೇಬೇಕಲ್ಲವೇ?

ವೃಕೋದರಕೀರ್ತನೇನ ಪಾಪಂ ಪ್ರಣಶ್ಯತಿ : ವೃಕೋದರನನ್ನು ಅಂದರೆ ಭೀಮಸೇನನ್ನು ಕೀರ್ತಿಸುವುದರಿಂದ ಪಾಪಗಳೆಲ್ಲವೂ ನಾಶವಾಗಿ ಹೋಗುತ್ತವೆ. ಏಕೆಂದರೆ ಭೀಮನು ಪಾಪರಹಿತನಾದ ಧೀರನು.

**ಧನಂಜಯ ಕೀರ್ತನೇನ ಶತ್ರುಃ ವಿನಶ್ಯತಿ :** ಧನಂಜಯನನ್ನು ಅಂದರೆ ಅರ್ಜುನನ್ನು ಕೀರ್ತನ ಮಾಡುವುದರಿಂದ ಎಲ್ಲಾ ಶತ್ರುಗಳು ಎಲ್ಲಾ ಶತ್ರುಗಳೂ ದೂರವಾಗುತ್ತಾರೆ. ಏಕೆಂದರೆ ಅರ್ಜುನನು ಪರಾಕ್ರಮಶಾಲಿಯೂ ಹೌದು, ಶ್ರೀಕೃಷ್ಣಪರಮಾತ್ಮನ ಶಿಷ್ಯನೂ ಹೌದು, ಮತ್ತು ಆತ್ಮಜ್ಞಾನಿಯೂ ಆಗಿದ್ದಾನೆ.

**ಮಾದ್ರೀಸುತೌ ಕಥಯತಾಂ ನ ಭವಂತಿ ರೋಗಾ :** ಮಾದ್ರೀ ಮಕ್ಕಳನ್ನು ಅಂದರೆ ನಕುಲಸಹದೇವರಿಬ್ಬರನ್ನೂ ಕೀರ್ತನ ಮಾಡುವುದರಿಂದ ಎಲ್ಲಾ ರೋಗಗಳೂ ನಾಶವಾಗಿ ಬಿಡುತ್ತವೆ. ಏಕೆಂದರೆ ಇವರಿಬ್ಬರೂ ಅಶ್ವಿನೀ ದೇವತೆಗಳ ಅನುಗ್ರಹದಿಂದ ಹುಟ್ಟಿರುತ್ತಾರೆ.

ಪಂಚ ಪಾಂಡವರು ಧರ್ಮಾತ್ಮರೂ, ಶ್ರೀಕೃಷ್ಣ ಪರಮಾತ್ಮನ ಭಕ್ತರೂ ಆಗಿರುತ್ತಾರೆ. ಇವರುಗಳ ಧರ್ಮ, ವಾಯು, ಇಂದ್ರ, ಅಶ್ವಿನೀ ದೇವತೆಗಳ ಅನುಗ್ರಹದಿಂದ ಹುಟ್ಟಿರುವ ದೇವತಾಪುರುಷರೂ ಹೌದು. ದೈವಾಂಶ ಸಂಭೂತರಿವರು. ಆದ್ದರಿಂದ ಇಂಥ ಪಂಚ ಪಾಂಡವರ ಹೆಸರುಗಳನ್ನು ಹೇಳುತ್ತಾ, ಅವರ ಗುಣಗಳನ್ನೂ ಸ್ಮರಿಸುತ್ತಾ, ಈ ಮೇಲಿನ ಶ್ಲೋಕವನ್ನು ಪಠಿಸಬೇಕು.

## ಯುಗಾದಿಯ ಆಶಯ



**ಹೊಸ ಸಂವತ್ಸರವ ಕಟ್ಟಲು**
**ಅಣಿಯಾಗಿದೆ ಪ್ರಕೃತಿ**
**ಬದುಕು ಸಾಗುವುದು**
**ಬೇವು ಬೆಲ್ಲದ ರೀತಿ**
**ಅಲ್ಲಲ್ಲಿ ಶುಭ ಕೋರಿದೆ**
**ಕೋಗಿಲೆಯ ಗಾನ**
**ಛಲ ಬಿಡದೆ ಗುರಿ ಸಾಧಿಸಿದರೆ**
**ಬಾಳು ನಂದನ**
**ಚಿಗುರೊಡೆದು ಮಾಮರದಂತೆ**
**ನವ ಕನಸುಗಳು ಹುಟ್ಟಲಿ**
**ಸಕಾರಾತ್ಮಕ ಚಿಂತನೆಗಳು ಜೀವನದಲ್ಲಿ**
**ಎಂದೆಂದೂ ಮೈಗೂಡಲಿ**
**ಹಸಿರುಡುಗೆ ತೊಟ್ಟು ಭೂರಮೆಯು**
**ಕಂಗೊಳಿಸುತ್ತಿದೆ ನೋಡು**
**ಸ್ನೇಹ ಬೆಳೆಸಿ ದ್ವೇಷ ಅಳಿಸಿ**
**ಎಲ್ಲಾರೊಟ್ಟಿಗೆ ಸಾಮರಸ್ಯದಿ ನೀ ಬಾಳು**

**ಶ್ರೀಮತಿ ಕಾವ್ಯ**
**ಅಭಿನವ ಭಾರತಿ ವಿದ್ಯಾ ಕೇಂದ್ರ, ಪ್ರಾಥಮಿಕ ಶಾಲೆ, ಮಂಡ್ಯ.**